# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ದಾವಣಗೆರೆ
ಬುಧವಾರ, ಏಪ್ರಿಲ್ 21, 2021

ಸಂಪುಟ : 47 ಸಂಚಿಕೆ : 351 ☎ 254736 91642 99999 RNI No: 27369/75, KA/SK/CTA-275/2021-2023. O/P @ J.D. Circle P.O. ಪುಟ : 4 ರೂ : 4.00 www.janathavani.com janathavani@mac.com


# 9ನೇ ತರಗತಿವರೆಗೆ ಎಲ್ಲರೂ ಪಾಸ್

## ಈ ವರ್ಷವೂ ಪರೀಕ್ಷೆ ರಹಿತವಾಗಿ ಬಡ್ತಿ ನೀಡಿದ ರಾಜ್ಯ ಸರ್ಕಾರ



ಬೆಂಗಳೂರು, ಏ. 20 - ಒಂದರಿಂದ ಒಂಭತ್ತನೆ ತರಗತಿವರೆಗಿನ ಪರೀಕ್ಷೆಗಳನ್ನು ರದ್ದುಗೊಳಿಸಿರುವ ರಾಜ್ಯ ಸರ್ಕಾರ, ಎಲ್ಲಾ ತರಗತಿಗಳ ವಿದ್ಯಾರ್ಥಿಗಳನ್ನು ಮುಂದಿನ ತರಗತಿಗೆ ಬಡ್ತಿ ನೀಡಿದೆ.

ನಿಗದಿಯಂತೆ ಹತ್ತನೇ ತರಗತಿ ಪರೀಕ್ಷೆ ಜೂನ್ 21 ರಿಂದ ಪ್ರಾರಂಭವಾಗಲಿದೆ ಎಂದು ರಾಜ್ಯ ಶಿಕ್ಷಣ ಇಲಾಖೆ ಇಂದು ಸುತ್ತೋಲೆ ಆದೇಶ ಹೊರಡಿಸಿದೆ.

ಕೊರೊನಾ ಸಾಂಕ್ರಾಮಿಕ ರೋಗದ ಹಿನ್ನೆಲೆಯಲ್ಲಿ ಕಳೆದ ವರ್ಷದಂತೆ ಈ ವರ್ಷವೂ ಪರೀಕ್ಷೆಗಳಿಲ್ಲದೆ, ಈ ತರಗತಿಯ ವಿದ್ಯಾರ್ಥಿಗಳಿಗೆ ಬಡ್ತಿ ನೀಡಲಾಗಿದೆ.

ಈ ಸಂಬಂಧ ಸವಿಸ್ತಾರವಾದ ವಿವರಣೆ ನೀಡಿರುವ ಇಲಾಖೆ ರಜೆ ದಿನಗಳಲ್ಲಿ ವಿದ್ಯಾರ್ಥಿಗಳು ತಮ್ಮ ಪಠ್ಯಗಳನ್ನು ಅಧ್ಯಯನ ಮಾಡುವುದರಲ್ಲಿ ಮಗ್ನರಾಗಬೇಕೆಂದು ತಿಳಿಸಿದೆ.

ಒಂದರಿಂದ ಐದನೇ ತರಗತಿ ಮತ್ತು ಆರರಿಂದ ಒಂಭತ್ತನೇ ತರಗತಿಗಳವರೆಗೆ ಮೌಲ್ಯಾಂಕನ ಕುರಿತು ಪ್ರತ್ಯೇಕ ಮಾರ್ಗಸೂಚಿಗಳನ್ನು ಹೊರಡಿಸಲಾಗಿದೆ.

1ರಿಂದ 9ನೇ ತರಗತಿಗಳ ವಿದ್ಯಾರ್ಥಿಗಳಿಗೆ ವಿದ್ಯಾಗಮ ಕಾರ್ಯಕ್ರಮದಲ್ಲಿ ನಿರ್ವಹಿಸಿದ ದಾಖಲೆಗಳು/ ಸಂವಹನದ ಆಧಾರದ ಮೇಲೆ ಕೆಲವು ಶಾಲೆಯವರು ಆನ್‌ಲೈನ್ ಮೂಲಕ ತರಗತಿ ನಿರ್ವಹಿಸಿದ್ದಲ್ಲಿ ಆ ಸಂದರ್ಭದಲ್ಲಿ ಅವಲೋಕಿಸಿದ ವಿದ್ಯಾರ್ಥಿಗಳ ಕಲಿಕಾ ಪ್ರಗತಿ ವಿಶ್ಲೇಷಿಸಿ ಪ್ರಗತಿ ಪತ್ರದಲ್ಲಿ ದಾಖಲಿಸಬೇಕು ಎಂದು ತಿಳಿಸಲಾಗಿದೆ.

ಮುಂದಿನ ತರಗತಿಗೆ ಬಡ್ತಿ ನೀಡುವುದು ಮತ್ತು ಅದನ್ನು ಪ್ರಗತಿ ಪತ್ರದಲ್ಲಿ ದಾಖಲಿಸುವುದು ಸೇರಿದಂತೆ, ಈ ಎಲ್ಲ ಪ್ರಕ್ರಿಯೆಗಳನ್ನು ಏಪ್ರಿಲ್ 30ರೊಳಗೆ ನಿರ್ವಹಿಸಿ ಫಲಿತಾಂಶ ದಾಖಲಿಸಿ (2ನೇ ಪುಟಕ್ಕೆ)

### ಮೇ 1ರಿಂದ ಬೇಸಿಗೆ ರಜೆ

**ಒಂದರಿಂದ ಏಳು/ಎಂಟನೇ ತರಗತಿಗಳು ಇರುವ ಪ್ರಾಥಮಿಕ ಶಾಲೆಗಳಿಗೆ ಮೇ 1ರಿಂದ ಜೂನ್ 14ರವರೆಗೆ ಬೇಸಿಗೆ ರಜೆ ಎಂದು ರಾಜ್ಯ ಸರ್ಕಾರದ ಪ್ರಕಟಣೆಯಲ್ಲಿ ತಿಳಿಸಲಾಗಿದೆ. ಜೂ. 15ರಿಂದ 2021-22ನೇ ಸಾಲಿನ ಶೈಕ್ಷಣಿಕ ವರ್ಷ ಆರಂಭವಾಗಲಿದೆ. 8 ಮತ್ತು 9ನೇ ತರಗತಿಗಳಲ್ಲಿನ ವಿದ್ಯಾರ್ಥಿಗಳಿಗೆ ಮೇ 1ರಿಂದ ಜುಲೈ 14ರವರೆಗೆ ಬೇಸಿಗೆ ರಜೆ ಪ್ರಕಟಿಸಲಾಗಿದೆ. ಪ್ರೌಢಶಾಲೆಗಳ ಶಿಕ್ಷಕರಿಗೆ ಜೂ. 15ರಿಂದ ಜುಲೈ 14ರವರೆಗೆ ಬೇಸಿಗೆ ರಜೆ ಇರಲಿದೆ.**

**ಜೂ. 21ರಿಂದ ಜು. 5ರವರೆಗೆ ಎಸ್ ಎಸ್ ಎಲ್ ಸಿ ಪರೀಕ್ಷೆಗಳು ನಡೆಯುತ್ತವೆ. ಜು. 15ರಿಂದ 2021-22ನೇ ಸಾಲಿನ ಶೈಕ್ಷಣಿಕ ವರ್ಷ ಆರಂಭವಾಗಲಿದೆ. ಈ ವೇಳಾಪಟ್ಟಿ ತಾತ್ಕಾಲಿಕವಾಗಿದ್ದು, ಕೋವಿಡ್ ಹಿನ್ನೆಲೆಯಲ್ಲಿ ಸರ್ಕಾರ, ಇಲಾಖೆ ಮತ್ತು ಜಿಲ್ಲಾಡಳಿತಗಳು ನೀಡುವ ಸೂಚನೆ ಮತ್ತು ನಿರ್ದೇಶನಗಳನ್ನು ಪಾಲಿಸುವುದು ಕಡ್ಡಾಯವಾಗಿದೆ.**

# ಇಂದಿನಿಂದ ರಾತ್ರಿ ಕರ್ಫ್ಯೂ

## ಮೇ 4ರವರೆಗೆ ರಾಜ್ಯಾದ್ಯಂತ ನಿರ್ಬಂಧ ಜಾರಿ

ಬೆಂಗಳೂರು, ಏ. 20 – ರಾಜ್ಯದಲ್ಲಿ ಕೊರೊನಾ ಉಲ್ಬಣಿಸುತ್ತಿರುವಂತೆಯೇ, ರಾಜ್ಯ ಸರ್ಕಾರ ರಾತ್ರಿ ಕರ್ಫ್ಯೂ ಹಾಗೂ ವಾರಾಂತ್ಯದ ಕರ್ಫ್ಯೂ ಹೇರಿ ಆದೇಶ ಹೊರಡಿಸಿದೆ. ಇಂದು ಬುಧವಾರ ರಾತ್ರಿ 9 ಗಂಟೆಯಿಂದ ಮೇ 4ರವರೆಗೆ ನಿರ್ಬಂಧಗಳು ಜಾರಿಯಲ್ಲಿರಲಿವೆ.

ಕೊರೊನಾ ನಿಯಂತ್ರಣಕ್ಕಾಗಿ ರಾಜ್ಯಪಾಲ ವಜೂಭಾಯಿ ವಾಲಾ ಹಾಗೂ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ನೇತೃತ್ವದಲ್ಲಿ ಕರೆಯಲಾಗಿದ್ದ ಸರ್ವ ಪಕ್ಷಗಳ ನಾಯಕರ ಸಭೆಯ ನಂತರ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ.

ವಾರದ ದಿನಗಳಲ್ಲಿ ಪ್ರತಿದಿನ ರಾತ್ರಿ 9ರಿಂದ ಬೆಳಿಗ್ಗೆ 6ರವರೆಗೆ ಕರ್ಫ್ಯೂ ಜಾರಿಯಲ್ಲಿರಲಿದೆ. ವಾರಾಂತ್ಯದಲ್ಲಿ ಶುಕ್ರವಾರ ರಾತ್ರಿ 9ರಿಂದ ಸೋಮವಾರ ಬೆಳಿಗ್ಗೆ 6ರವರೆಗೆ ಕರ್ಫ್ಯೂ ಜಾರಿಯಲ್ಲಿರುತ್ತದೆ ಎಂದು ರಾಜ್ಯ ಮುಖ್ಯ ಕಾರ್ಯದರ್ಶಿ ಪಿ. ರವಿಕುಮಾರ್ ಆದೇಶ ಹೊರಡಿಸಿದ್ದಾರೆ.

ಆದರೆ, ರಾತ್ರಿ ಕಾರ್ಯನಿರ್ವಹಣೆ ಅಗತ್ಯವಿರುವ ಕೈಗಾರಿಕೆಗಳಿಗೆ ರಾತ್ರಿ ಕರ್ಫ್ಯೂದಿಂದ ವಿನಾಯಿತಿ ಇದೆ. ಟೆಲಿಕಾಂ, ವೈದ್ಯಕೀಯ ಸೇವೆ ಮತ್ತಿತರೆ ಸೇವೆಗಳಿಗೆ ನಿರ್ಬಂಧ ಇಲ್ಲ. ಸರಕು ಸಾಗಣೆ ಮೇಲೆ ನಿರ್ಬಂಧವಿಲ್ಲ. ದೂರ ಪ್ರಯಾಣದ ಬಸ್, ರೈಲು ಹಾಗೂ ವಿಮಾನಯಾನಕ್ಕೆ ಅನುಮತಿ ಇದೆ. ಇಂತಹ ಪ್ರಯಾಣಕ್ಕೆ ನೆರವಾಗಲು ಆಟೋ ಮತ್ತಿತರೆ ಸಾರಿಗೆಗೂ ಅವಕಾಶವಿದೆ.

ವಾರಾಂತ್ಯದ ಕರ್ಫ್ಯೂ ವೇಳೆ ತುರ್ತು ಸೇವೆ ಒದಗಿಸುವ ಸರ್ಕಾರಿ ಕಚೇರಿಗಳು, 24 ಗಂಟೆ ಕಾರ್ಯ ನಿರ್ವಹಣೆ ಅತ್ಯವಿರುವ



ಕೈಗಾರಿಕೆಗಳು, ದಿನಸಿ ಅಂಗಡಿಗಳು, ಅಗತ್ಯ ಸರಕುಗಳ ಅಂಗಡಿಗಳು, ಹೋಟೆಲ್‌ಗಳ ಪಾರ್ಸಲ್ ಸೇವೆ, ದೂರ ಪ್ರಯಾಣದ ಬಸ್, ರೈಲು ಹಾಗೂ ವಿಮಾನಗಳ ಸೇವೆಗೆ ಅವಕಾಶ ಇದೆ.

**ಇವುಗಳ ಮೇಲೆ ನಿಷೇಧ :** ಕರ್ಫ್ಯೂ ಜೊತೆಗೆ ಹಲವಾರು ಚಟುವಟಿಕೆಗಳ ಮೇಲೆ ನಿಷೇಧ ಹೇರಲಾಗಿದೆ. ಅದರಂತೆ ಶಾಲಾ - ಕಾಲೇಜು, ಶಿಕ್ಷಣ ಸಂಸ್ಥೆಗಳು ಬಂದ್ ಆಗಿರುತ್ತವೆ. (ಆನ್‌ಲೈನ್ ಹಾಗೂ ದೂರ ಶಿಕ್ಷಣಕ್ಕೆ ಅನುಮತಿ ಇದೆ)

ಚಿತ್ರಮಂದಿರ, ಶಾಪಿಂಗ್ ಮಾಲ್, ಜಿಮ್, ಯೋಗ, ಸ್ಪಾ, ಕ್ರೀಡಾ ಚಟುವಟಿಕೆ, ಸ್ಟೇಡಿಯಂ, ಈಜುಕೊಳ, ಮನರಂಜನೆ ಪಾರ್ಕ್, ಆಡಿಟೋರಿಯಂ ಬಂದ್ ಆಗಲಿವೆ. ಎಲ್ಲ ರೀತಿಯ ಸಾಮಾಜಿಕ, ರಾಜಕೀಯ, ಕ್ರೀಡೆ, ಮನರಂಜನೆ, ಶೈಕ್ಷಣಿಕ, ಸಾಂಸ್ಕೃತಿಕ, ಧಾರ್ಮಿಕ ಮತ್ತಿತರೆ ಸಮಾವೇಶಗಳು ನಿಷಿದ್ಧ.

ಧಾರ್ಮಿಕ ಸ್ಥಳಗಳು ಸಾರ್ವಜನಿಕರಿಗೆ ಬಂದ್ ಆಗಿರುತ್ತವೆ. ಆದರೆ, ಪೂಜಾ ವಿಧಿಗಳು ಮುಂದುವರೆಯಲಿವೆ. ರೆಸ್ಟೋರೆಂಟ್ ಹಾಗೂ ಹೋಟೆಲ್‌ಗಳಲ್ಲಿ ಪಾರ್ಸಲ್‌ಗೆ ಮಾತ್ರ (3ನೇ ಪುಟಕ್ಕೆ)

## ದೇಶವ್ಯಾಪಿ ಲಾಕ್‌ಡೌನ್ ಇಲ್ಲ



ನವದೆಹಲಿ, ಏ. 20 – ಕೊರೊನಾ ಎದುರಿಸುವಲ್ಲಿ ಲಾಕ್‌ಡೌನ್ ಕೊನೆಯ ಅಸ್ತ್ರವಾಗಿರಬೇಕು ಎಂದು ಹೇಳಿರುವ ಪ್ರಧಾನ ಮಂತ್ರಿ ನರೇಂದ್ರ ಮೋದಿ, ವಲಸೆ ಕಾರ್ಮಿಕರು ತಾವು ಕೆಲಸ ಮಾಡುತ್ತಿರುವ ಊರುಗಳಲ್ಲೇ ಇರುವಂತೆ ರಾಜ್ಯಗಳು ಮನವೊಲಿಸಬೇಕು ಎಂದು ಕರೆ ನೀಡಿದ್ದಾರೆ.

ದೇಶದಲ್ಲಿ ಕೊರೊನಾ ಉಲ್ಬಣಿಸುತ್ತಿರುವ ಹಾಗೂ ಹಲವಾರು ರಾಜ್ಯಗಳು ಲಾಕ್‌ಡೌನ್‌ಗೆ ಮುಂದಾಗುತ್ತಿರುವ ನಡುವೆ ರಾಷ್ಟ್ರವನ್ನು ಉದ್ದೇಶಿಸಿ ಮಾತನಾಡಿರುವ ಪ್ರಧಾನಿ, (3ನೇ ಪುಟಕ್ಕೆ)

## ಕಟ್ಟಡ, ಕೈಗಾರಿಕೆಗಳಿಗೆ ಅನುಮತಿ

ಎಲ್ಲಾ ರೀತಿಯ ಕಟ್ಟಡ ನಿರ್ಮಾಣ, ರಿಪೇರಿ ಚಟುವಟಿಕೆಗಳಿಗೆ ಅನುಮತಿ ಮುಂದುವರೆಸಲಾಗಿದೆ. ಮುಂಗಾರು ಪೂರ್ವ ಕಾಮಗಾರಿಗಳಿಗೂ ಅನುಮತಿ ಇದೆ.

ಎಲ್ಲಾ ರೀತಿಯ ಕೈಗಾರಿಕೆಗಳು ಹಾಗೂ ಉತ್ಪಾದನಾ ಘಟಕಗಳು ಕೊರೊನಾ ನಿಯಮಗಳ ಅನ್ವಯ ಕಾರ್ಯ ನಿರ್ವಹಿಸಬಹುದು.

ಪಡಿತರ ಅಂಗಡಿ, ಆಹಾರ, ದಿನಸಿ, ಹಣ್ಣು - ತರಕಾರಿ, ಹಾಲು, ಮಾಂಸ, ಮೀನು ಮತ್ತು ಮಾಂಸದ ಅಂಗಡಿಗಳಿಗೆ ಅನುಮತಿ ಇದೆ. ಸಗಟು ತರಕಾರಿ, (2ನೇ ಪುಟಕ್ಕೆ)

## ಸಂಚಾರ, ಸಾಗಣೆಗೆ ಯಾವುದೇ ನಿರ್ಬಂಧವಿಲ್ಲ

ಸರಕು ಸಾಗಣೆಯ ಮೇಲೆ ಯಾವುದೇ ನಿರ್ಬಂಧ ಹೇರುವಂತಿಲ್ಲ. ಸರಕುಗಳ ಸಾಗಣೆಗೆ ಯಾವುದೇ ಪ್ರತ್ಯೇಕ ಅನುಮತಿ ಪಡೆಬೇಕಿಲ್ಲ.ಸರ್ಕಾರಿ ಸಾರಿಗೆ ಸೇರಿದಂತೆ ಖಾಸಗಿ ಬಸ್, ರೈಲು, ಟ್ಯಾಕ್ಸಿ, ಆಟೋ ರಿಕ್ಷಾ ಮತ್ತಿತರೆ ವಾಹನಗಳಿಗೆ ಅನುಮತಿ ಇದೆ. ಆದರೆ, ವಾಹನಗಳ ಸಾಮರ್ಥ್ಯದ ಅರ್ಧದಷ್ಟು ಜನರು ಮಾತ್ರ ಪ್ರಯಾಣಿಸಬಹುದು. ಎಲ್ಲಾ ರೀತಿಯ ಸರಕುಗಳ ಸಾಗಣೆಗೆ ಅನುಮತಿ ಇದೆ. ಕೃಷಿ ಮತ್ತು ಸಂಬಂಧಿಸಿದ ಚಟುವಟಿಕೆಗಳು, ಆರೋಗ್ಯ ಸೇವೆಗಳಿಗೆ ಅನುಮತಿ ಇದೆ. ಮದುವೆಗಳಲ್ಲಿ 50 ಹಾಗೂ ಅಂತ್ಯಸಂಸ್ಕಾರದಲ್ಲಿ 20 ಜನರು ಮಾತ್ರ ಭಾಗವಹಿಸಬಹುದು.

## ಐಸಿಎಸ್‌ಇ ಹತ್ತನೇ ತರಗತಿ ಪರೀಕ್ಷೆ ರದ್ದು

ನವದೆಹಲಿ, ಏ. 20 - ಐಸಿಎಸ್‌ಇ ಹತ್ತನೇ ತರಗತಿ ಮಂಡಳಿ ಪರೀಕ್ಷೆಗಳನ್ನು ಕೊರೊನಾ ಪರಿಸ್ಥಿತಿಯ ಹಿನ್ನೆಲೆಯಲ್ಲಿ ರದ್ದುಗೊಳಿಸಲಾಗಿದೆ. ವಿದ್ಯಾರ್ಥಿಗಳು ನಂತರದ ದಿನದಲ್ಲಿ ಪರೀಕ್ಷೆಗೆ ಹಾಜರಾಗಲು ಇದ್ದ ಆಯ್ಕೆಯನ್ನೂ ವಾಪಸ್ ಪಡೆಯಲಾಗಿದೆ.


ಕಳೆದ ವಾರ ಐಸಿಎಸ್‌ಇ ತನ್ನ 10 ಹಾಗೂ 12ನೇ ತರಗತಿ ಪರೀಕ್ಷೆಗಳನ್ನು ಮುಂದೂಡಿತ್ತು. ಹತ್ತನೇ ತರಗತಿಯ ವಿದ್ಯಾರ್ಥಿಗಳು ಮೌಲ್ಯಮಾಪನ ಆಧರಿತ ಮಾನದಂಡದ ಮೂಲಕ ಮೌಲ್ಯಾಂಕನಕ್ಕೆ ಒಳಪಡಲು, ಇಲ್ಲವೇ ನಂತರದಲ್ಲಿ ನಡೆಸಲಾಗುವ ಪರೀಕ್ಷೆಗೆ ಹಾಜರಾಗಲು ಅವಕಾಶ ನೀಡುವುದಾಗಿ ತಿಳಿಸಲಾಗಿತ್ತು.

ಆದರೆ, ಕೊರೊನಾ ಪರಿಸ್ಥಿತಿ ಮತ್ತಷ್ಟು ಹದಗೆಟ್ಟ ಹಿನ್ನೆಲೆಯಲ್ಲಿ ಹತ್ತನೇ ತರಗತಿಯ ಪರೀಕ್ಷೆಯನ್ನೇ ರದ್ದುಗೊಳಿಸಲಾಗಿದೆ.

## ಮುಷ್ಕರಕ್ಕೆ ಇದು ಸಮಯವಲ್ಲ

### ಸಾರಿಗೆ ನೌಕರರು ಮುಷ್ಕರ ನಿಲ್ಲಿಸಲು ಹೈ ಸೂಚನೆ

ಬೆಂಗಳೂರು, ಏ. 20 - ಇಡೀ ರಾಜ್ಯ ಕೊರೊನಾ ವೈರಸ್ ಹಿಡಿತದಲ್ಲಿರುವುದರಿಂದ ಮುಷ್ಕರ ನಡೆಸುವ ಸಮಯ ಇದಲ್ಲ. ಕೂಡಲೇ ಮುಷ್ಕರ ನಿಲ್ಲಿಸಿ, ಸೇವೆ ಆರಂಭಿಸಿ ಎಂದು ಹೈಕೋರ್ಟ್ ಮಂಗಳವಾರ ಮುಷ್ಕರ ನಿರತ ಸಾರಿಗೆ ನೌಕರರಿಗೆ ಸೂಚನೆ ನೀಡಿದೆ.



ಸಾರಿಗೆ ಮುಷ್ಕರದ ವಿರುದ್ಧ ಸಲ್ಲಿಕೆಯಾಗಿದ್ದ ಹಲವು ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳ ವಿಚಾರಣೆ ನಡೆಸಿದ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ಮತ್ತು ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರಿದ್ದ ಪೀಠ, ಕೋವಿಡ್ ಸಂಕಷ್ಟದ ಸಮಯದಲ್ಲಿ ಮುಷ್ಕರ ನಡೆಸುವುದು ಸರಿಯಲ್ಲ. ನಿಮ್ಮ ಬೇಡಿಕೆ ಕಾಯ್ದಿರಿಸಿ ತಕ್ಷಣ ಸೇವೆ ಆರಂಭಿಸಿ ಎಂದು ಹೇಳಿದೆ.

ಇದೇ ವೇಳೆ ರಾಜ್ಯ ಸರ್ಕಾರ, ಸಾರಿಗೆ ಇಲಾಖೆ ಮತ್ತು ನೌಕರರ ಸಂಘಕ್ಕೆ ನೋಟಿಸ್ ನೀಡಲಾಗಿದೆ. ಕೊರೊನಾ ಸಂಕಷ್ಟದಿಂದಾಗಿ ಜನರು ತತ್ತರಿಸಿದ್ದಾರೆ. ಲಸಿಕಾ ಕೇಂದ್ರಕ್ಕೆ ಜನರು ಹೋಗುವುದೇ ಕಷ್ಟ ಆಗಿದೆ. ಆಸ್ಪತ್ರೆಗೆ ಹೋಗುವುದಕ್ಕೂ (3ನೇ ಪುಟಕ್ಕೆ)

## ರಾಹುಲ್ ಗಾಂಧಿಗೆ ಕೊರೊನಾ



ನವದೆಹಲಿ, ಏ. 20 - ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರಿಗೆ ಕೊರೊನಾ ಸೋಂಕು ಬಂದಿದ್ದು, ಅವರಲ್ಲಿ ಲಕ್ಷಣಗಳು ಕಂಡು ಬಂದಿವೆ. ಲಘು ಲಕ್ಷಣ ಗಳ ನಂತರ ನಾನು ಕೊರೊನಾ ಪರೀಕ್ಷೆಗೆ ಒಳಗಾದಾಗ ಪಾಸಿಟಿವ್ ಬಂದಿದೆ. ಇತ್ತೀಚೆಗೆ ನನ್ನ ಸಂಪ ರ್ಕಕ್ಕೆ ಬಂದವರು ಸುರಕ್ಷತಾ ಶಿಷ್ಟಾಚಾರ ಪಾಲನೆ ಮಾಡಬೇಕು ಎಂದು ರಾಹುಲ್ ಗಾಂಧಿ ಹೇಳಿದ್ದಾರೆ. ರಾಹುಲ್ ಗಾಂಧಿ ಶೀಘ್ರ ಗುಣಮುಖರಾಗಲೆಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಟ್ವೀಟ್ ಮಾಡಿದ್ದಾರೆ.

## ಲಾಕ್‌ಡೌನ್ ಕಡೆ ಸಾಗುತ್ತಿರುವ ರಾಜ್ಯಗಳು

### ಮುಂದಿನ 3 ವಾರ ಕಠಿಣ ಎಂದ ಕೇಂದ್ರ

ನವದೆಹಲಿ ಏ. 20 – ದೇಶದಲ್ಲಿ ಕೊರೊನಾ ಪ್ರಕರಣಗಳು ಉಲ್ಬಣಿಸುತ್ತಿರುವ ನಡುವೆ, ಹಲವಾರು ರಾಜ್ಯಗಳು ಭಾಗಶಃದಿಂದ ಪೂರ್ಣ ಪ್ರಮಾಣದ ಲಾಕ್‌ಡೌನ್ ಕಡೆ ಹೆಜ್ಜೆ ಹಾಕಿವೆ. ದೇಶದಲ್ಲಿ ಮೊದಲ ಬಾರಿಗೆ ಸಕ್ರಿಯ ಸೋಂಕುಗಳ ಸಂಖ್ಯೆ 20 ಲಕ್ಷ ದಾಟುತ್ತಿರುವಂತೆಯೇ, ಹಲವೆಡೆ ಆಕ್ಸಿಜನ್ ಹಾಗೂ ರೆಮ್ಡಿಸಿವಿರ್ ಔಷಧಿಗಳ ಕೊರತೆ ಹೆಚ್ಚಾಗುತ್ತಿದೆ.

ದೇಶ ಅತ್ಯಂತ ಕೆಟ್ಟ ಆರೋಗ್ಯ ಸಂಕಷ್ಟ ಎದುರಿಸುತ್ತಿದೆ ಎಂದು ಹೇಳಿರುವ ಕೇಂದ್ರ ಸರ್ಕಾರ, ಮುಂದಿನ ಮೂರು ವಾರ ಕಠಿಣವಾಗಿದೆ. ಈ ಸಂದರ್ಭದಲ್ಲಿ ವೈದ್ಯಕೀಯ ಸೌಲಭ್ಯ ಹಾಗೂ ಪೂರೈಕೆಗಳನ್ನು ಬಲಗೊಳಿಸಬೇಕು ಎಂದು ತಿಳಿಸಿದೆ.

ದೆಹಲಿ ನಂತರ ಜಾರ್ಖಂಡ್ (2ನೇ ಪುಟಕ್ಕೆ)

# ನಗರದ ಅಭಿವೃದ್ಧಿಯಲ್ಲಿ ಹೋಟೆಲ್ ಉದ್ದಿಮೆದಾರರ ಪಾತ್ರ ಮಹತ್ವದ್ದು



ದಾವಣಗೆರೆ, ಏ.20- ನಗರದ ಅಭಿವೃದ್ದಿಗೆ ಹೋಟೆಲ್ ಉದ್ದಿಮೆದಾರರ ಪಾತ್ರ ಮಹತ್ವದ್ದು ಎಂದು ಮಹಾನಗರ ಪಾಲಿಕೆ ಮೇಯರ್ ಎಸ್.ಟಿ. ವೀರೇಶ್ ಹೇಳಿದರು.

ದಾವಣಗೆರೆ ಹೋಟೆಲ್ ಉದ್ದಿಮೆದಾರರ ಸಂಘ ಹಾಗೂ ಮಹಾನಗರ ಪಾಲಿಕೆ ಸಹಯೋಗದಲ್ಲಿ ನಗರದ ಅಪೂರ್ವ ರೆಸ್ಟೋರೆಂಟ್ ಸಭಾಂಗಣದಲ್ಲಿ ಮಂಗಳವಾರ ಹಮ್ಮಿಕೊಳ್ಳಲಾಗಿದ್ದ 'ಉದ್ಯಮ ಪರವಾನಗಿ ಮೇಳ'ದ ಉದ್ಘಾಟನಾ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಅವರು ಮಾತನಾಡಿದರು.

ವಾಣಿಜ್ಯ ನಗರಿ ಹಾಗೂ ವಿದ್ಯಾನಗರಿ ಎಂದು ಗುರುತಿಸಿಕೊಂಡಿರುವ ದಾವಣಗೆರೆಯಲ್ಲಿ ಹೋಟೆಲ್ ಉದ್ದಿಮೆದಾರರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ರಾಜ್ಯದ ಹಲವಾರು ಜಿಲ್ಲೆಗಳಿಂದ ವಾಣಿಜ್ಯ, ಶೈಕ್ಷಣಿಕ ಸೇರಿದಂತೆ ಮತ್ತಿತರೆ ಕೆಲಸಗಳಿಗೆ ಜನರು ನಗರಕ್ಕೆ ಬಂದು ಹೋಗುತ್ತಾರೆ. ಇವರೆಲ್ಲರಿಗೂ ಊಟ, ವಸತಿ ನೀಡುವ ಕೆಲಸವನ್ನು ಹೋಟೆಲ್ ಉದ್ದಿಮೆಗಳು ಮಾಡುತ್ತಿವೆ. ಆ ಮೂಲಕ ದಾವಣಗೆರೆ ನಗರದ ಅಭಿವೃದ್ಧಿಯಲ್ಲೂ ಪ್ರಮುಖ ಪಾತ್ರ ವಹಿಸುತ್ತಿವೆ ಎಂದರು.

**ಹೋಟೆಲ್ ಉದ್ಯಮ ಪರವಾನಗಿ ಮೇಳಕ್ಕೆ ಚಾಲನೆ ನೀಡಿದ ಪಾಲಿಕೆ ಮೇಯರ್ ಎಸ್.ಟಿ. ವೀರೇಶ್**

ನಗರದ ನಾಗರಿಕರ ಆರೋಗ್ಯ ಕಾಪಾಡುವ ಹಾಗೂ ಅವರಿಗೆ ಬೇಕಾದ ಮೂಲ ಸೌಕರ್ಯಗಳನ್ನು ಕಲ್ಪಿಸುವುದು ಮಹಾನಗರ ಪಾಲಿಕೆಯ ಜವಾಬ್ದಾರಿ. ಈ ವ್ಯವಸ್ಥೆಯು ಅನೇಕ (2ನೇ ಪುಟಕ್ಕೆ)

**ಮಹಾನಗರ ಪಾಲಿಕೆಯಿಂದ ಉದ್ದಿಮೆ ಪರವಾನಗಿ ನವೀಕರಣಕ್ಕೆ ಮೊದಲಿನಂತೆ ಹೆಚ್ಚು ಶ್ರಮ ಪಡಬೇಕಾಗಿಲ್ಲ. ಒಮ್ಮೆ ಪರವಾನಗಿ ಪಡೆದರೆ, ಮುಂದಿನ ವರ್ಷ ಆಟೋಮ್ಯಾಟಿಕ್ ಆಗಿ ಚಲನ್ ಜನರೇಟ್ ಆಗಿ ನಿಮಗೆ ಸಂದೇಶ ಬರುತ್ತದೆ. ನೀವು ಶುಲ್ಕ ಭರ್ತಿ ಮಾಡಿದರೆ ಸಾಕು ನಿಮ್ಮ ಪರವಾನಗಿ ನವೀಕರಣವಾಗುತ್ತದೆ. ಉದ್ದಿಮೆದಾರರು ಇಷ್ಟು ಸರಳವಾದ ಪ್ರಕ್ರಿಯೆಯ ಸದುಪಯೋಗ ಪಡೆದುಕೊಳ್ಳಬೇಕು.**

**- ವಿಶ್ವನಾಥ ಮುದಜ್ಜಿ, ಪಾಲಿಕೆ ಆಯುಕ್ತ**

**ದಾವಣಗೆರೆಯಲ್ಲಿ 2018ರಲ್ಲಿ ಸುಮಾರು 270ಕ್ಕೂ ಹೆಚ್ಚು ಹೋಟೆಲ್‌ಗಳಿದ್ದವು. ಹೋಟೆಲ್ ಉದ್ದಿಮೆದಾರರ ಸಂಘದಲ್ಲಿ 145 ಹೋಟೆಲ್‌ಗಳ ಮಾಲೀಕರು ಸದಸ್ಯತ್ವ ಪಡೆದಿದ್ದಾರೆ. ಆದರೆ ಲೈಸನ್ಸ್ ಪಡೆದವರು ಅಂದಾಜು 80-90 ಮಾತ್ರ. ಕಳೆದ ಬಾರಿ ಲಾಕ್‌ಡೌನ್ ವೇಳೆ ಸುಮಾರು 60 ಹೋಟೆಲ್‌ಗಳು ಶಾಶ್ವತವಾಗಿ ಮುಚ್ಚಲ್ಪಟ್ಟಿವೆ. ನಂತರ ಸುಮಾರು 30-35 ಹೊಸ ಹೋಟೆಲ್‌ಗಳು ಆರಂಭವಾಗಿವೆ.**

**- ಬಿ.ಕೆ. ಸುಬ್ರಹ್ಮಣ್ಯ,**
**ಹೋಟೆಲ್ ಉದ್ದಿಮೆದಾರರ ಸಂಘದ ಕಾರ್ಯದರ್ಶಿ**

## ಅನುದಾನ ರಹಿತ ಶಿಕ್ಷಕರಿಗೆ ಸೌಲಭ್ಯ

ಬೆಂಗಳೂರು, ಏ. 20 - ಖಾಸಗಿ ಅನುದಾನ ರಹಿತ ಶಾಲಾ-ಕಾಲೇಜುಗಳ ಶಿಕ್ಷಕರನ್ನು ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿಯ ಆಜೀವ ಸದಸ್ಯರನ್ನಾಗಿ ನೇಮಕ ಮಾಡಿಕೊಂಡು 'ಅನುದಾನ ರಹಿತ ಶಿಕ್ಷಕರತ್ತ ಸರ್ಕಾರ' ಎಂಬ ಧ್ಯೇಯದೊಂದಿಗೆ ನಿಧಿಯ ಸೌಲಭ್ಯಗಳನ್ನು ವಿಸ್ತರಿಸಲಾಗುವುದು ಎಂದು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಸುರೇಶ್ ಕುಮಾರ್ ತಿಳಿಸಿದ್ದಾರೆ.

ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿ ಮತ್ತು (2ನೇ ಪುಟಕ್ಕೆ)


MANIS DATA LINK
BSNL
# 446/1, Lawyer Road, K.B.Extension, Davanagere.
ನಿಮ್ಮಲ್ಲಿರುವ ಹಳೇ ಲ್ಯಾಂಡ್ ಲೈನ್ ನಂಬರ್‌ಗೆ ಇಂಟರ್‌ನೆಟ್ (FTTH) ಸೌಲಭ್ಯ ಕಲ್ಪಿಸಲಾಗುವುದು
3300 GB
60 Mbps
Super Speed Inter Net
24 Hrs. Unlimited free Calling on (Local + STD) to Any Network, FTTH Plan
Starting Plan
Rs.599/-
Instalation Free
PH: 08192 295900


## ಹೈಕೋರ್ಟ್‌ನ ಲಾಕ್‌ಡೌನ್ ಆದೇಶಕ್ಕೆ ಸುಪ್ರೀಂ ತಡೆ

ನವದೆಹಲಿ, ಏ. 20 - ಕೊರೊನಾ ಹಿನ್ನೆಲೆಯಲ್ಲಿ ಉತ್ತರ ಪ್ರದೇಶದ ಐದು ನಗರಗಳಲ್ಲಿ ಲಾಕ್‌ಡೌನ್ ಹೇರಬೇಕು ಎಂದು ಅಲಹಾಬಾದ್ ಹೈಕೋರ್ಟ್ ನೀಡಿದ ನಿರ್ದೇಶನಕ್ಕೆ ಸುಪ್ರೀಂ ಕೋರ್ಟ್ ಮಧ್ಯಂತರ ತಡೆಯಾಜ್ಞೆ ಹೊರಡಿಸಿದೆ.

ಹೈಕೋರ್ಟ್ ಆದೇಶ ಪ್ರಶ್ನಿಸಿ ಉತ್ತರಪ್ರದೇಶ ಸರ್ಕಾರ ದಾಖಲಿಸಿದ ಅರ್ಜಿಯ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಎಸ್.ಎ. (2ನೇ ಪುಟಕ್ಕೆ)

## ಕೊರೊನಾ: ಯುಜಿಸಿ-ನೆಟ್ ಪರೀಕ್ಷೆ ಮುಂದೂಡಿಕೆ

ನವದೆಹಲಿ, ಏ. 20 - ಮೇ 2ರಿಂದ ನಡೆಯಬೇಕಿದ್ದ ಯು.ಜಿ.ಸಿ. - ನೆಟ್ ಪರೀಕ್ಷೆಯನ್ನು ಕೊರೊನಾ ಹಿನ್ನೆಲೆಯಲ್ಲಿ ಮುಂದೂಡಲಾಗಿದೆ ಎಂದು ಶಿಕ್ಷಣ ಸಚಿವ ರಮೇಶ್ ಪೊಖ್ರಿಯಾಲ್ ನಿಶಾಂಕ್ ಹೇಳಿದ್ದಾರೆ. ಪರಿಷ್ಕೃತ ಪರೀಕ್ಷೆಯ ದಿನಾಂಕವನ್ನು ಕನಿಷ್ಠ ಹದಿನೈದು ದಿನ ಮುಂಚೆ ಪ್ರಕಟಿಸಲಾಗುವುದು ಎಂದು ಪರೀಕ್ಷೆ ನಡೆಸುವ ರಾಷ್ಟ್ರೀಯ ಪರೀಕ್ಷಾ ಸಂಸ್ಥೆ (ಎನ್‌ಟಿಎ) ತಿಳಿಸಿದೆ.

## ಶರಣ ಬಸವೇಶ್ವರ ಸಂಸ್ಥಾನದ ಬಸವರಾಜಪ್ಪ ಅಪ್ಪ ಇನ್ನಿಲ್ಲ



ಕಲಬುರ್ಗಿ, ಏ. 20 - ಇಲ್ಲಿನ ಶರಣ ಬಸವೇಶ್ವರ ದಾಸೋಹ ಮಹಾ ಸಂಸ್ಥಾನದ ಪೀಠಾಧಿಪತಿಯಾಗಿದ್ದ ದಿ. ದೊಡ್ಡಪ್ಪ ಅಪ್ಪ ಅವರ ಎರಡನೇ ಪುತ್ರ ಬಸವರಾಜಪ್ಪ ಅಪ್ಪ ಅವರು ಅನಾರೋಗ್ಯದಿಂದ ಮಂಗಳವಾರ ನಿಧನರಾಗಿದ್ದಾರೆ. ಅವರಿಗೆ 80 ವರ್ಷ ವಯಸ್ಸಾಗಿತ್ತು.

ಇದೇ 17ರಂದು ಅವರ ಪತ್ನಿ ನಳಿನಿದೇವಿ ಅವರು ನಿಧನರಾಗಿದ್ದರು. ಬಸವರಾಜಪ್ಪ ಅಪ್ಪ ಅವರಿಗೆ ವಿಶ್ವ ಹಿಂದೂ ಪರಿಷತ್ ಜಿಲ್ಲಾ ಗೌರವ ಅಧ್ಯಕ್ಷ ಹಾಗೂ ಸಮಾಜ ಸೇವಕ ಲಿಂಗರಾಜಪ್ಪ ಅಪ್ಪ ಸೇರಿದಂತೆ ಇಬ್ಬರು ಪುತ್ರರು, ಐವರು ಪುತ್ರಿಯರು ಇದ್ದಾರೆ. ಹಲವು ಕಾಲದಿಂದ ನಗರದ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಬಸವರಾಜಪ್ಪ ಅವರು ಪ್ರಸ್ತುತ ಪೀಠಾಧಿಪತಿಯಾಗಿರುವ ಡಾ.ಶರಣ ಬಸವಪ್ಪ ಅಪ್ಪ ಅವರ ಕಿರಿಯ ಸಹೋದರ.

## ಪೊಲೀಸರಿಂದ ಸವಿನಯ ಮಾಸ್ಕ್ ಅಭಿಯಾನ

### ಡ್ರಂ ಸೆಟ್, ಪಥಸಂಚಲನದೊಂದಿಗೆ ಜನರಿಗೆ ಮಾಸ್ಕ್ ವಿತರಿಸಿ ಅರಿವು ಮೂಡಿಸಿದ ಎಸ್ಪಿ ಹನುಮಂತರಾಯ

ದಾವಣಗೆರೆ, ಏ. 20 - ಕಳೆದ ಎರಡು ದಿನಗಳಿಂದ ದಂಡದ ಮೂಲಕ ಕೊರೊನಾ ತಡೆಗಾಗಿ ಅಭಿಯಾನ ನಡೆಸುತ್ತಿದ್ದ ಜಿಲ್ಲಾಡಳಿತ, ಮಂಗಳವಾರದಂದು ಮನವೊಲಿಕೆಯ ಮೂಲಕ ಮಾಸ್ಕ್ ಧರಿಸುವಂತೆ ಪ್ರಚಾರ ನಡೆಸಿದೆ.

ಅದರಲ್ಲೂ ಕಠಿಣ ಕ್ರಮಗಳಿಗೆ ಹೆಸರಾದ ಪೊಲೀಸರೇ ಅತ್ಯಂತ ಸೌಜನ್ಯದಿಂದ ನಾಗರಿಕರು ಮಾಸ್ಕ್ ಧರಿಸುವಂತೆ ಮನವೊಲಿಸುವ ಪ್ರಯತ್ನ ನಡೆಸಿದ್ದು ವಿಶೇಷವಾಗಿತ್ತು.



ಎಸ್ಪಿ ಹನುಮಂತರಾಯ ಅವರ ನೇತೃತ್ವದಲ್ಲಿ ನಗರದ ಗಡಿಯಾರ ಕಂಬದಿಂದ ಮಾಸ್ಕ್ ಪರ ಅಭಿಯಾನ ನಡೆಸಲಾಯಿತು. ಮಾಸ್ಕ್ ಧರಿಸುವಂತೆ ಪೊಲೀಸ್ ಡ್ರಂ ಸೆಟ್ ಮೂಲಕ ಪಥ ಸಂಚಲನೆ ನಡೆಸಿದ್ದು ವಿಶೇಷವಾಗಿತ್ತು.

ಗಡಿಯಾರ ಕಂಬ, ಬಿನ್ನಿ ಕಂಪನಿ ರಸ್ತೆ ಹಾಗೂ ಚಾಮರಾಜ ಪೇಟೆಗಳಲ್ಲಿ ಈ ಅಭಿಯಾನ ನಡೆಸಲಾಯಿತು. ಈ ಸಂದರ್ಭದಲ್ಲಿ ಭಿತ್ತಿಪತ್ರಗಳನ್ನೂ ಪ್ರದರ್ಶಿಸಲಾಯಿತು.

ಮಾಸ್ಕ್ ಧರಿಸದವರಿಗೆ ಮಾಸ್ಕ್ ವಿತರಿಸುವ ಮೂಲಕ, ಕೊರೊನಾ ಪರಿಸ್ಥಿತಿಯಲ್ಲಿ ಮಾಸ್ಕ್ ಧರಿಸುವ ಅಗತ್ಯದ ಬಗ್ಗೆ ತಿಳಿ ಹೇಳಲಾಯಿತು. ಈ ಬಾರಿ ಯಾವುದೇ ದಂಡ ವಿಧಿಸದೇ ಕೇವಲ ವಿನಂತಿ ಹಾಗೂ ಮನವಿ (2ನೇ ಪುಟಕ್ಕೆ)


HYUNDAI MG Jeep
IMMEDIATE HIRING
SALES EXECUTIVES - FIELD
For DAVANAGERE and Surrounding area
Experienance -1 year experience, Salary : 18k pm+Incentives
Good communication, selling and negotiating skills.
Required to cover the locations assigned.
BELLAD GROUP OF COMPANIES
Contact: 9686718809 / 7760985888
Send CV's to: resumes@belladandcompany.com or
Visit our website : www.belladandcompany.com and apply

# ಅಭಿವೃದ್ಧಿಯಲ್ಲಿ ಹೋಟೆಲ್ ಉದ್ದಿಮೆದಾರರ ಪಾತ್ರ ಮಹತ್ವದ್ದು

**(1ನೇ ಪುಟದಿಂದ)** ಹಂತದಲ್ಲಿ ನಡೆಯುತ್ತದೆ ಎಂದ ಮೇಯರ್, ಜನರ ಆರೋಗ್ಯ ಕಾಪಾಡುವ ನಿಟ್ಟಿನಲ್ಲಿ ನಗರದ ಸ್ವಚ್ಛತೆ ನೋಡಿಕೊಳ್ಳುವುದು ಹಾಗೂ ಉದ್ದಿಮೆದಾರರಿಗೆ ಟ್ರೇಡ್ ಲೈಸನ್ಸ್ ನೀಡುವ ಜವಾಬ್ದಾರಿ ಅಧಿಕಾರಿಗಳ ಮೇಲಿದೆ ಎಂದರು.

ಹೋಟೆಲ್ ಉದ್ದಿಮೆದಾರರಿಗೆ ಮಂಗಳೂರು ಹಾಗೂ ಮೈಸೂರು ಮಾದರಿಯಲ್ಲಿ ಸರಳವಾಗಿ ಟ್ರೇಡ್ ಲೈಸನ್ಸ್ ನೀಡುವ ಬಗ್ಗೆ ಸಂಘದವರು ಸಲಹೆ ನೀಡಿದ್ದರು. ನಾನು ಈ ಬಗ್ಗೆ ಪಾಲಿಕೆ ಆಯುಕ್ತರೊಂದಿಗೆ ಮಾತನಾಡಿದೆ. ಅವರಿಗೂ ಈ ಸಲಹೆ ಸೂಕ್ತವೆನಿಸಿ, ಒಪ್ಪಿಕೊಂಡಾಗ, ಇಂತಹದ್ದೊಂದು ಮೇಳ ಆಯೋಜಿಸಲು ಸಾಧ್ಯವಾಯಿತು. ಆರಂಭದಲ್ಲಿ ಈ ಪರವಾನಗಿ ಮೇಳ ನಿರೀಕ್ಷಿತ ಸಫಲತೆ ಪಡೆಯದಿದ್ದರೂ, ಮುಂದಿನ ದಿನಗಳಲ್ಲಿ ಹೆಚ್ಚಿನ ಪರಿಣಾಮಕಾರಿಯಾಗಿ ನಡೆಯಲಿದೆ ಎಂದು ಹೇಳಿದರು.

ಕೊರೊನಾ ಲಾಕ್‌ಡೌನ್ ವೇಳೆ ಹೆಚ್ಚು ಸಂಕಷ್ಟ ಅನುಭವಿಸಿದ್ದೇ ಹೋಟೆಲ್ ಉದ್ದಿಮೆದಾರರು. ದೊಡ್ಡ ಹೋಟೆಲ್‌ನವರು ದೊಡ್ಡ ಮಟ್ಟದ ಸಂಕಷ್ಟ ಅನುಭವಿಸಿದರೆ, ಚಿಕ್ಕ ಹೋಟೆಲ್‌ನವರು ಸಣ್ಣ ಪ್ರಮಾಣದ ಸಂಕಷ್ಟ ಅನುಭವಿಸಿದ್ದಾರೆ. ಆದರೂ ಆರಂಭದ ದಿನಗಳಲ್ಲಿ ಸಾಕಷ್ಟು ಬಡ ಜನತೆಗೆ ಆಹಾರದ ಕಿಟ್ ವಿತರಿಸಿ ನೆರವಾಗಿದ್ದಾರೆ. ಮನರಂಜನೆ ಸೇರಿದಂತೆ ಅನೇಕ ಕಾರ್ಯಕ್ರಮಗಳಿಗೆ ಧನ ಸಹಾಯ ಮಾಡಿದ್ದಾರೆ ಎಂದು ಶ್ಲಾಘಿಸಿದರು.

ಅನೇಕ ಹೋಟೆಲ್ ಉದ್ದಿಮೆದಾರರು ನನ್ನ ಆತ್ಮೀಯರೇ ಆಗಿದ್ದು, ನಾನೂ ಸಹ ಸಂಘದ ಸದಸ್ಯನೇ ಎಂಬ ಭಾವ ಮೂಡುವಷ್ಟರ ಮಟ್ಟಿಗೆ ನನ್ನ ಒಡನಾಟವಿದೆ. ಮಹಾನಗರ ಪಾಲಿಕೆ ಸದಾ ನಿಮ್ಮೊಟ್ಟಿಗೆ ಇರುತ್ತದೆ ಎಂದು ಭರವಸೆ ನೀಡಿದರು.

ಪ್ರಸ್ತುತ ದಿನಗಳಲ್ಲಿ ಮತ್ತೆ ಕೊರೊನಾ ಎರಡನೇ ಅಲೆ ಕಾಣಿಸಿಕೊಂಡಿದೆ. ಮುಂದೆ ಮತ್ತಷ್ಟು ಹೆಚ್ಚಾಗುವ ಸಾಧ್ಯತೆ ಇದೆ. ನಿಮ್ಮ ವೈಯಕ್ತಿಕ ಆರೋಗ್ಯದ ಬಗ್ಗೆ ಕಾಳಿಜಿ ವಹಿಸುವ ಜೊತೆಗೆ, ಕುಟುಂಬ ಹಾಗೂ ಗ್ರಾಹಕರ ಆರೋಗ್ಯದ ಬಗ್ಗೆಯೂ ಕಾಳಜಿ ವಹಿಸಿ. ಸರ್ಕಾರದ ಸೂಚನೆಗಳನ್ನು ಕಟ್ಟು ನಿಟ್ಟಾಗಿ ಪಾಲನೆ ಮಾಡಿ ಎಂದು ಸಲಹೆ ನೀಡಿದರು.

ಮಹಾನಗರ ಪಾಲಿಕೆ ಆಯುಕ್ತ ವಿಶ್ವನಾಥ ಮುದಜ್ಜಿ ಮಾತನಾಡಿ, ಪಾಲಿಕೆ ವ್ಯಾಪ್ತಿಯಲ್ಲಿ ಹೋಟೆಲ್ ಉದ್ದಿಮೆದಾರರೂ ಸೇರಿದಂತೆ ಸುಮಾರು 25 ಸಾವಿರ ಉದ್ದಿಮೆದಾರರಿದ್ದಾರೆ. ಮಹಾನಗರ ಪಾಲಿಕೆಗೆ ಇವರು ಆದಾಯದ ಮೂಲವೂ ಹೌದು ಎಂದರು.

ಪ್ರತಿ ವರ್ಷ ಉದ್ದಿಮೆದಾರರು ಪರವಾನಗಿ ನವೀಕರಿಸಿಕೊಳ್ಳಬೇಕಾದ ಅಗತ್ಯವಿದೆ. ಆದರೆ ನಿರೀಕ್ಷಿತ ಮಟ್ಟದಲ್ಲಿ ನವೀಕರಣವಾಗುತ್ತಿಲ್ಲ. ಹೊಸದಾಗಿ ಪರವಾನಗಿ ಪಡೆದವರಲ್ಲಿ ನವೀಕರಣದ ಬಗೆಗಿನ ಮಾಹಿತಿ ಕೊರತೆ ಇದೆ. ಪ್ರತಿ ವರ್ಷ ಇಂತಹ ಮೇಳ ನಡೆಸಿ ಮಾಹಿತಿ ನೀಡುವ ಕೆಲಸವಾಗಬೇಕು ಎಂದರು.

ಯಾವುದೇ ಉದ್ಯಮಕ್ಕೆ ಏನಾದರೂ ತೊಂದರೆಯಾದರೆ, ಮೊದಲು ಲೈಸನ್ಸ್ ಇದೆಯಾ? ಎಂದು ಪ್ರಶ್ನಿಸಲಾಗುತ್ತದೆ. ಆದ್ದರಿಂದ ಪರವಾನಗಿ ಮಹತ್ವವನ್ನು ಎಲ್ಲರೂ ಅರಿಯಬೇಕು. ಸಂಘದಿಂದ ಹೆಚ್ಚಿನ ಪ್ರಚಾರ ನೀಡಿ ಎಲ್ಲರನ್ನೂ ಈ ವ್ಯವಸ್ಥೆ ಒಳಗೆ ತರಲು ಸಹಕರಿಸಬೇಕು ಎಂದರು.

ಪಾಲಿಕೆ ಹಾಗೂ ಉದ್ದಿಮೆದಾರರ ನಡುವೆ ಪರಸ್ಪರ ಸಹಕಾರ ಅಗತ್ಯ. ಆದಾಯದ ದೃಷ್ಟಿಯಲ್ಲಿ ಪಾಲಿಕೆಗೂ ಉದ್ದಿಮೆದಾರರ ಅಗತ್ಯತೆ ಇರುತ್ತದೆ. ಕಳೆದ ಬಾರಿ ಕೊರೊನಾ ಬಂದಾಗ ಮುನ್ನೆಚ್ಚರಿಕೆ ಕ್ರಮ ತೆಗೆದುಕೊಂಡಂತೆ ಈ ಬಾರಿಯೂ ಮುಂದಾಗಬೇಕು ಎಂದರು.

ಹೋಟೆಲ್ ಉದ್ದಿಮೆದಾರರ ಸಂಘದ ಗೌರವಾಧ್ಯಕ್ಷ ಅಣಬೇರು ರಾಜಣ್ಣ ಮಾತನಾಡಿ, ಎಲ್ಲಾ ಹೋಟೆಲ್‌ಗಳಲ್ಲಿ ಸರ್ಕಾರದ ನಿಯಮಗಳನ್ನು ಪಾಲಿಸಲಾಗುತ್ತಿದೆ. ಇಲ್ಲಿಯವರೆಗೆ ಯಾವ ಹೋಟೆಲ್ ಗಳಿಂದಲೂ ಕೊರೊನಾ ಹರಡಿಲ್ಲ ಎಂದರು.

ಹೊಸ ಪರವಾನಗಿ ಹಾಗೂ ನವೀಕರಣಕ್ಕೆ ಉದ್ದಿಮೆದಾರರು ಪ್ರತ್ಯೇಕವಾಗಿ ಪಾಲಿಕೆಗೆ ತೆರಳುವ ಬದಲು ಒಂದೇ ಸೂರಿನಡಿ ಸೌಲಭ್ಯ ಸಿಗಲಿ ಎಂಬ ನಿಟ್ಟಿನಲ್ಲಿ ಹೊಸ ಪ್ರಯತ್ನಕ್ಕೆ ಮುಂದಾಗಿದ್ದೇವೆ. ಹೋಟೆಲ್ ಉದ್ದಿಮೆಗೆ ಮಹಾನಗರ ಪಾಲಿಕೆ ಉತ್ತಮವಾಗಿ ಸ್ಪಂದಿಸುತ್ತಿದೆ ಎಂದರು.

ಮಹಾನಗರ ಪಾಲಿಕೆ ಸದಸ್ಯ ಗಡಿಗುಡಾಳ್ ಮಂಜುನಾಥ್ ಮಾತನಾಡುತ್ತಾ, ತಡವಾಗಿಯಾದರೂ ಇಂತಹ ಮೇಳವೊಂದು ನಡೆಯುತ್ತಿರುವುದು ಸಂತಸದ ವಿಚಾರ. ದೊಡ್ಡ ಉದ್ದಿಮೆದಾರರು ಚಿಕ್ಕ ಉದ್ದಿಮೆದಾರರನ್ನು ಕರೆ ತಂದು ಪರವಾನಗಿ ನವೀಕರಿಸಲು ಹೇಳಬೇಕು ಎಂದರು. ಕೊರೊನಾ ವೇಳೆ ಹೆಚ್ಚಿನದಾಗಿ ಸಹಕರಿಸಿದ್ದಕ್ಕೆ ಧನ್ಯವಾದ ಅರ್ಪಿಸುತ್ತಾ, ಎರಡನೇ ಅಲೆಯ ಹಿನ್ನೆಲೆಯಲ್ಲಿ ಮತ್ತಷ್ಟು ಎಚ್ಚರಿಕೆ ವಹಿಸುವಂತೆ ಹೋಟೆಲ್ ಮಾಲೀಕರಿಗೆ ಕಿವಿ ಮಾತು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಸಂಘದ ಅಧ್ಯಕ್ಷ ಮೋತಿ ಆರ್.ಪರಮೇಶ್ವರ್ ಮಾತನಾಡಿ, ಪ್ರತಿ ವರ್ಷ ಪರವಾನಗಿ ನವೀಕರಣ ಕಷ್ಟವಾಗಿದ್ದು, ಐದು ವರ್ಷಕ್ಕೊಮ್ಮೆ ನವೀಕರಿಸುವ ವ್ಯವಸ್ಥೆ ಮಾಡಬೇಕು. ಹೋಟೆಲ್ ಉದ್ದಿಮೆದಾರರಿಗೆ ಸರ್ಕಾರ ಸಹಕಾರ ನೀಡಬೇಕು ಎಂದು ಮನವಿ ಮಾಡಿದರು.

ಮಹಾನಗರ ಪಾಲಿಕೆಯ ಆರೋಗ್ಯ ಸ್ಥಾಯಿ ಸಮಿತಿ ಸದಸ್ಯ ಎಲ್.ಡಿ. ಗೋಣೆಪ್ಪ, ಆರೋಗ್ಯಾಧಿಕಾರಿ ಡಾ.ಸಂತೋಷ್ ಉಪಸ್ಥಿತರಿದ್ದರು. ಸಂಘದ ಕಾರ್ಯದರ್ಶಿ ಬಿ.ಕೆ. ಸುಬ್ರಹ್ಮಣ್ಯ ಕಾರ್ಯಕ್ರಮ ನಿರೂಪಿಸಿದರು.

## ಅನುದಾನ ರಹಿತ ಶಿಕ್ಷಕರಿಗೆ ಸೌಲಭ್ಯ

**(1ನೇ ಪುಟದಿಂದ)** ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ನಿಧಿ ಮತ್ತು ರಾಷ್ಟ್ರೀಯ ಶಿಕ್ಷಕರ ಕಲ್ಯಾಣ ಪ್ರತಿಷ್ಠಾನ ಈ ಕುರಿತು ಆದೇಶ ಹೊರಡಿಸಿ, ಕೊರೊನಾದಂತಹ ಸಂಕಷ್ಟ ಕಾಲದಲ್ಲಿ ಖಾಸಗಿ ಶಿಕ್ಷಕರು ತೀವ್ರ ಸಂಕಷ್ಟ ಅನುಭವಿಸಿದ್ದರಿಂದಾಗಿ ಎಲ್ಲ ಶಿಕ್ಷಕರಂತೆ ಕಷ್ಟಕಾಲದ ತತ್‌ಕ್ಷಣದ ನೆರವಿಗೆ ಶಿಕ್ಷಣ ನಿಧಿಯ ಸದಸ್ಯತ್ವ ನೀಡಿ ಆ ಮೂಲಕ ನಿಧಿಯಿಂದ ಸರ್ಕಾರಿ ಹಾಗೂ ಅನುದಾನಿತ ಶಿಕ್ಷಕರಿಗೆ ದೊರೆಯುವ ಸೌಲಭ್ಯ ನೀಡಲು ನಿರ್ಧಾರ ಮಾಡಲಾಗಿದೆ ಎಂದು ತಿಳಿಸಿದ್ದಾರೆ.

## ಪೊಲೀಸರಿಂದ ಮಾಸ್ಕ್ ಅಭಿಯಾನ



**(1ನೇ ಪುಟದಿಂದ)** ಮೂಲಕ ಜಾಗೃತಿ ಮೂಡಿಸುವ ಪ್ರಯತ್ನ ನಡೆಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಎಸ್ಪಿ ಹನುಮಂತರಾಯ, ಜನರು ಮಾಸ್ಕ್ ಧರಿಸುವ ಮೂಲಕ ತಮ್ಮ ಆರೋಗ್ಯ ರಕ್ಷಣೆ ಮಾಡಿಕೊಳ್ಳುವುದಷ್ಟೇ ಅಲ್ಲದೇ, ಬೇರೆಯವರ ಆರೋಗ್ಯಕ್ಕೂ ನೆರವಾಗಬೇಕು.

ದಂಡ ವಿಧಿಸುವ ಹಾಗೂ ಕಠಿಣ ಕ್ರಮ ಅನಿವಾರ್ಯವಾಗುವ ಪರಿಸ್ಥಿತಿ ತರಬಾರದು ಎಂದು ಹೇಳಿದರು.

## ಕೈಗಾರಿಕೆಗಳಿಗೆ ಅನುಮತಿ

(1ನೇ ಪುಟದಿಂದ) ಹಣ್ಣು, ಹೂವಿನ ಮಾರು ಕಟ್ಟೆಗಳು ತೆರೆದ ಬಯಲಿನಲ್ಲಿ ಕಾರ್ಯ ನಿರ್ವಹಿಸಬೇಕು. ಲಾಡ್ಜಿಂಗ್ ಹೋಟೆಲ್‌ನಲ್ಲಿ ಉಳಿದುಕೊಂಡವರಿಗೆ ಸೇವೆ ಒದಗಿಸಬಹುದು. ಮದ್ಯದ ಅಂಗಡಿಗಳು ಪಾರ್ಸಲ್ ಸೇವೆ ಮೂಲಕ ಕಾರ್ಯ ನಿರ್ವಹಿಸಬೇಕು. ಬ್ಯಾಂಕ್, ವಿಮೆ ಹಾಗೂ ಎಟಿಎಂಗಳಿಗೆ ಅನುಮತಿ ಇದೆ. ಮುದ್ರಣ ಹಾಗೂ ವಿದ್ಯುನ್ಮಾನ ಮಾಧ್ಯಮಗಳಿಗೆ ಅನುಮತಿ ಇದೆ. ಇ-ಕಾಮರ್ಸ್ ಮೂಲಕ ಪಾರ್ಸಲ್ ಪೂರೈಸಲು ಅವಕಾಶವಿದೆ. ಶೀತಲ ಘಟಕ, ಗೋದಾಮುಗಳಿಗೆ ಅವಕಾಶ ಇದೆ. ಕಟಿಂಗ್ ಶಾಪ್‌ಗಳು ಮಾರ್ಗಸೂಚಿ ಅನ್ವಯ ಕಾರ್ಯ ನಿರ್ವಹಿಸಬಹುದು. ಸರ್ಕಾರಿ ಹಾಗೂ ಸ್ವಾಯತ್ತ ಸಂಸ್ಥೆಗಳು ಶೇ.50ರಷ್ಟು ಸಿಬ್ಬಂದಿಯೊಂದಿಗೆ ಕಾರ್ಯ ನಿರ್ವಹಿಸಬೇಕು. ತುರ್ತು ಹಾಗೂ ಅಗತ್ಯ ಸೇವೆಯಲ್ಲಿ ತೊಡಗಿರುವವರು ಪೂರ್ಣ ಸಾಮರ್ಥ್ಯದಲ್ಲಿ ಕಾರ್ಯ ನಿರ್ವಹಿಸಬಹುದು.

## ಲಾಕ್‌ಡೌನ್ ಕಡೆ ಸಾಗುತ್ತಿರುವ ರಾಜ್ಯಗಳು

**(1ನೇ ಪುಟದಿಂದ)** ಏಪ್ರಿಲ್ 22 ರಿಂದ ಒಂದು ವಾರದ ಲಾಕ್‌ಡೌನ್ ಹೇರಿದೆ. ಮಹಾರಾಷ್ಟ್ರ ಸಹ ಲಾಕ್‌ಡೌನ್ ಇಂಗಿತ ವ್ಯಕ್ತಪಡಿಸುತ್ತಿದೆ. ತೆಲಂಗಾಣ ರಾತ್ರಿ ಕರ್ಫ್ಯೂ ಹೇರಿದ್ದರೆ, ಉತ್ತರ ಪ್ರದೇಶ ವಾರಾಂತ್ಯದ ಲಾಕ್‌ಡೌನ್‌ಗೆ ಮುಂದಾಗಿದೆ.

ಪಂಜಾಬ್, ರಾಜಸ್ಥಾನ, ಕೇರಳ, ಒಡಿಸಾ, ಛತ್ತೀಸ್‌ಘಡ, ಮಧ್ಯ ಪ್ರದೇಶ ಹಾಗೂ ಜಮ್ಮು ಮತ್ತು ಕಾಶ್ಮೀರಗಳಲ್ಲಿ ರಾತ್ರಿ ಕರ್ಫ್ಯೂ ಈಗಾಗಲೇ ಜಾರಿಯಲ್ಲಿದೆ. ಆದರೆ, ಕೊರೊನಾ ಅಬ್ಬರ ನಿಲ್ಲುವ ಸೂಚನೆ ಕಾಣುತ್ತಿಲ್ಲ. ರಾಜಸ್ಥಾನ, ಒಡಿಶಾ, ಆಂಧ್ರ ಪ್ರದೇಶ ಹಾಗೂ ಕೇರಳಗಳಲ್ಲಿ ದಾಖಲೆಯ ಪ್ರಕರಣಗಳು ಕಂಡು ಬರುತ್ತಿವೆ.

## ಹೈಕೋರ್ಟ್‌ನ ಲಾಕ್‌ಡೌನ್ ಆದೇಶಕ್ಕೆ ತಡೆ

**(1ನೇ ಪುಟದಿಂದ)** ಬೊಬ್ಡೆ ಅವರ ನೇತೃತ್ವದ ಪೀಠ, ಸೋಮವಾರ ಹೈಕೋರ್ಟ್ ಹೊರಡಿಸಿದ ಆದೇಶವನ್ನು ತಡೆದಿದೆ.

ಉತ್ತರ ಪ್ರದೇಶ ಸರ್ಕಾರದ ಪರವಾಗಿ ಹಾಜರಿದ್ದ ಸಾಲಿಸಿಟರ್ ಜನರಲ್ ತುಶಾರ್ ಮೆಹ್ತಾ, ಕೊರೊನಾ ತಡೆಯಲು ರಾಜ್ಯ ಸರ್ಕಾರ ಹಲವಾರು ಕ್ರಮಗಳನ್ನು ತೆಗೆದುಕೊಂಡಿದೆ. ಆದರೆ, ನ್ಯಾಯಾಂಗದ ಆದೇಶದ ಮೂಲಕ ಲಾಕ್‌ಡೌನ್ ಹೇರುವುದು ಸೂಕ್ತ ಮಾರ್ಗವಲ್ಲ ಎಂದಿದ್ದರು.

ಈ ವಿಷಯಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರಕ್ಕೆ ಹಲವಾರು ನಿರ್ದೇಶನಗಳನ್ನು ಈಗಾಗಲೇ ನೀಡಿದೆ ಹಾಗೂ ಸಮರ್ಪಕ ಮುನ್ನೆಚ್ಚರಿಕೆ. ಹೈಕೋರ್ಟ್ ಆದೇಶದಿಂದ ಹಲವಾರು ಆಡಳಿತ ತೊಡಕುಗಳು ಉಂಟಾಗಲಿವೆ ಎಂದು ಮೆಹ್ತ ತಿಳಿಸಿದ್ದಾರೆ.

ಹೈಕೋರ್ಟ್ ಆದೇಶಕ್ಕೆ ಮಧ್ಯಂತರ ತಡೆಯಾಜ್ಞೆ ಹೊರಡಿಸಿರುವ ಸುಪ್ರೀಂ ಕೋರ್ಟ್, ಹಿರಿಯ ವಕೀಲ ಪಿ.ಎಸ್. ನರಸಿಂಹ ಅವರನ್ನು ಅಮಿಕಸ್ ಕ್ಯೂರಿ ಆಗಿ ನೇಮಿಸಿದೆ.

ಈ ವಿಷಯವನ್ನು ಎರಡು ವಾರಗಳ ನಂತರ ವಿಚಾರಣೆಗೆ ಒಳಪಡಿಸುವುದಾಗಿ ಪೀಠ ತಿಳಿಸಿದೆ.

## 9ನೇ ತರಗತಿವರೆಗೆ ಎಲ್ಲರೂ ಪಾಸ್

**(1ನೇ ಪುಟದಿಂದ)** ಪೂರ್ಣಗೊಳಿಸಲು ನಿರ್ದೇಶನ ನೀಡಲಾಗಿದೆ ಎಂದು ಸಚಿವರು ತಿಳಿಸಿದ್ದಾರೆ. ಒಂದರಿಂದ ಐದನೇ ತರಗತಿವರೆಗೆ ಶಾಲಾ ಹಂತದಲ್ಲಿ ಮಕ್ಕಳ ಪ್ರಗತಿ ವಿಶ್ಲೇಷಿಸಿ ಎಲ್ಲ ವಿದ್ಯಾರ್ಥಿಗಳನ್ನು ಮುಂದಿನ ತರಗತಿಗಳಿಗೆ ಬಡ್ತಿ ನೀಡಲಾಗುವುದು.

ಹಾಗೆಯೇ ಈ ತರಗತಿಗಳ ವಿದ್ಯಾರ್ಥಿಗಳು ಶಾಲೆಗೆ ಭೌತಿಕವಾಗಿ ಹಾಜರಾಗಲು ಕರೆಯಬಾರದು. ಮಕ್ಕಳಿಗೆ ಪ್ರತ್ಯೇಕ ಆನ್‌ಲೈನ್ ಇಲ್ಲವೇ ಆಫ್‌ಲೈನ್ ಮೂಲಕವೂ ಸಹ ಮೌಲ್ಯಾಂಕನ ಮಾಡಬಾರದು. ಮೌಲ್ಯಾಂಕನಕ್ಕಾಗಿ ಈ ಮಕ್ಕಳನ್ನು ಶಾಲೆಗಳಿಗೆ ಹಾಜರಾಗುವಂತೆ ಸೂಚಿಸಬಾರದು ಎಂದು ತಿಳಿಸಲಾಗಿದೆ.

6 ರಿಂದ 9ನೇ ತರಗತಿಗಳ ಮಕ್ಕಳು ಭೌತಿಕವಾಗಿ ತರಗತಿಗಳಿಗೆ ಹಾಜರಾಗುತಿದ್ದರು. ಹಾಗೆಯೇ ದೂರದರ್ಶನ ಸೇರಿ ಹಲವು ಮಾರ್ಗಗಳಿಂದ ಕಲಿಕೆಯಲ್ಲಿ ತೊಡಗಿದ್ದರು. ಹೀಗಾಗಿ ಮಕ್ಕಳ ಮೌಲ್ಯಮಾಪನ ಹಾಗೂ ಸಂಕಲನಾತ್ಮಕ ಮೌಲ್ಯಮಾಪನವನ್ನು ನಿರ್ವಹಿಸಿದ ದಾಖಲೆಗಳನ್ನಾಧರಿಸಿ ಪಡೆದ ಅಂಕಗಳನ್ನು 100ಕ್ಕೆ ವೃದ್ಧಿಸಿ ಶ್ರೇಣಿ ನಮೂದಿಸಿ ಮುಂದಿನ ತರಗತಿಗಳಿಗೆ ಬಡ್ತಿ ನೀಡಲಾಗುತ್ತದೆ.

ಈ ಬಾರಿಯ ಮೌಲ್ಯಾಂಕನ ಉತ್ತೀರ್ಣತೆಗೆ ಸಂಬಂಧಿಸಿದ್ದಲ್ಲ. ಮಕ್ಕಳ ಕಲಿಕೆಯ ಪ್ರಗತಿ ಹಾಗೂ ಕೊರತೆಯನ್ನು ತಿಳಿದು ಮುಂದಿನ ಶೈಕ್ಷಣಿಕ ವರ್ಷದ ಆರಂಭದಲ್ಲಿ ಸೇತು-ಬಂಧ ಕಾರ್ಯಕ್ರಮವನ್ನು ನಡೆಸಿ ಈ ಕೊರತೆಯನ್ನು ತುಂಬಲು ಕ್ರಮ ವಹಿಸಲು ಶಾಲಾ ಯೋಜನೆಯನ್ನು ತಯಾರಿಸಲಾಗುತ್ತದೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.


**ಜಮೀನು ಮಾರಾಟಕ್ಕಿದೆ**
ಹರಪನಹಳ್ಳಿ ತಾಲ್ಲೂಕು ಅರಸೀಕೆರೆ ಹೋಬಳಿ ಹಿರೇಮೇಗಳಗೆರೆ ಗ್ರಾಮದಲ್ಲಿ 5.53 ಮತ್ತು 6.55 ಎಕರೆ ಅಕ್ಕ ಪಕ್ಕ ಇರುವ ಒಟ್ಟು ವಿಸ್ತೀರ್ಣ 12.08 ಎಕರೆ. ಅಕ್ಕ ಪಕ್ಕದಲ್ಲಿ ರಸ್ತೆ, 3 ಬೋರ್‌ಗಳಿವೆ. ದಾವಣಗೆರೆಯಿಂದ 10 ಕಿ.ಮೀ. ಹತ್ತಿರದಲ್ಲಿದೆ.
ಬೂಸ್ನೂರು ಕಿರಣ್ (ಏಜೆಂಟ್)
98440 63409, 97315 63409

ಮಾಸ್ಕ್ ಬಳಸಿ ಕೊರೊನಾ ತೊಲಗಿಸಿ

**ಬಿಲ್ಡಿಂಗ್ ಬಾಡಿಗೆಗಿದೆ**
ಚಾಮರಾಜಪೇಟೆ ಸರ್ಕಲ್ ಹತ್ತಿರ, ಕಲ್ಲೇಶ್ವರ ಕಿರಾಣಿ ಅಂಗಡಿ ಮೇಲ್ಭಾಗದಲ್ಲಿ 3 ಮಹಡಿ ಇರುವ 10,000 ಚದುರ ಅಡಿ ವಿಶಾಲವಾದ ಜಾಗ ಇರುವ ಬಿಲ್ಡಿಂಗ್ ಬಾಡಿಗೆಗಿದೆ. ಸಂಪರ್ಕಿಸಿ :
ಮೊ. : 98453 17181

ಜೈ ಶ್ರೀಮನ್ನಾರಾಯಣ
ವಿಕಾಸ ತರಂಗಿಣಿ, ದಾವಣಗೆರೆ
25ನೇ ವರ್ಷದ
ಉಚಿತ ಮಜ್ಜಿಗೆ ವಿತರಣೆ ಕಾರ್ಯಕ್ರಮ
ಏಪ್ರಿಲ್ 1 ರಿಂದ ಮೇ 15ರವರೆಗೆ.
ಸ್ಥಳ : ಮಹಾನಗರ ಪಾಲಿಕೆ ಆವರಣ
ಇಂದಿನ ಮಜ್ಜಿಗೆ ಪ್ರಾಯೋಜಕರು :
ಚಿ|| ಎಂ.ವಿ ಪ್ರಮಲ್ ಇವರ ಹುಟ್ಟುಹಬ್ಬದ ಪ್ರಯುಕ್ತ ಎಂ.ಟಿ. ರಾಜಾರಾವ್, ಜಮೀನ್ದಾರರು, ಹೊಸಳ್ಳಿ ಮತ್ತು ಕುಟುಂಬ ವರ್ಗದವರ ಸೇವಾರ್ಥ

**ಎಂ.ಸಿ.ಸಿ ಬಿ ಬ್ಲಾಕ್‌ನಲ್ಲಿ ಸೈಟ್, ಮನೆ ಮಾರಾಟಕ್ಕೆ**
ಎಂ.ಸಿ.ಸಿ. ಎ & ಬಿ ಸೈಟ್,ಮನೆ, ಆಂಜನೇಯ, ಸಿದ್ದವೀರಪ್ಪ ಸೈಟ್, ಮನೆ, ಡಾಲರ್ಸ್, ಎಸ್ಎಸ್ಎಂ ಸೈಟ್‌ಗಳು ಪಿ.ಜೆ. ಎಕ್ಸ್‌ಟೆನ್ಷನ್ ಸೈಟ್‌ಗಳು, ವಿದ್ಯಾನಗರ ಮನೆ ಸೈಟ್, ಮನೆ ಮಾರಾಟಕ್ಕೆ, ಖರೀದಿಗೆ ವಿಚಾರಿಸಿ
76765 58585 (ವೀರೇಶ್)

**ಸೈಟ್‌ಗಳು ಮಾರಾಟಕ್ಕಿವೆ**
ವಿನಾಯಕ ಬಡಾವಣೆಯಲ್ಲಿ 30x40 ದಕ್ಷಿಣ, ಶಿವ ಪಾರ್ವತಿ ಬಡಾವಣೆಯಲ್ಲಿ 30x48 ಪೂರ್ವ, 30x48 ಪಶ್ಚಿಮ, ಬನಶಂಕರಿ ಬಡಾವಣೆಯಲ್ಲಿ 40x33 ಪಶ್ಚಿಮ, ಸ್ವಾಮಿ ವಿವೇಕಾನಂದ ಬಡಾವಣೆಯಲ್ಲಿ 30x50 ಉತ್ತರ.
ಸ್ವಾಮಿ ಏಜೆಂಟ್ ವಿದ್ಯಾನಗರ
97421 44715

**ಮಾರಾಟಕ್ಕೆ**
ಶಿವಪ್ಪ ಸರ್ಕಲ್ ಹತ್ತಿರ (ಶೆಟ್ರು ಜಿನ್) ಸೈಟ್ (ಪಶ್ಚಿಮ) 18×42, 35×42, ಕುವೆಂಪು ನಗರ ಸೈಟ್ (ಪಶ್ಚಿಮ) 24×50, ಸ್ವಾಮಿ ವಿವೇಕಾನಂದ ಬಡಾವಣೆ ಸೈಟು (ಪಶ್ಚಿಮ) 30×60, ಬನಶಂಕರಿ ಬಡಾವಣೆ ಸೈಟ್ (ಪೂರ್ವ) 30×50, ಅಂಬಿಕ ನಗರ ಸೈಟ್ ( ಪಶ್ಚಿಮ) 30×50
78996 36597, 99165 25828

**ಸಿಂಗಲ್ ಬೆಡ್ ರೂಂ ಮನೆ ಬಾಡಿಗೆಗೆ ಇದೆ**
ಎನ್.ಆರ್ ರಸ್ತೆ ಜೈನ್ ಟೆಂಪಲ್ ಹತ್ತಿರ ಒಂದು ಬೆಡ್ ರೂಂ ಇರುವ ಮನೆ ಬಾಡಿಗೆಗಿದೆ ಸಂಪರ್ಕಿಸಿ
70199 88456

**ಮನೆ & ರೂಂಗಳು ಬಾಡಿಗೆ/ಲೀಸ್‌ಗಿವೆ**
ವಿನೋಬನಗರ, 4ನೇ ಮೇನ್, 3ನೇ ಕ್ರಾಸ್‌ನಲ್ಲಿ ಮನೆ ಮತ್ತು ರೂಂಗಳು ಬಾಡಿಗೆ/ಲೀಸ್‌ಗಿವೆ.
98442 41311, 87225 41967

**ಜಾಗ ಮಾರಾಟಕ್ಕಿದೆ**
ಪಿ.ಜೆ. ಬಡಾವಣೆ, 3ನೇ ಮುಖ್ಯರಸ್ತೆ, ಚೇತನ ಹೋಟೆಲ್ ಹತ್ತಿರ, 80x30 ಅಡಿ ಅಳತೆಯ ಜಾಗ ಮಾರಾಟಕ್ಕಿದೆ. ಆಸಕ್ತರು ಸಂಪರ್ಕಿಸಿ :
97310 55765

**ಸಂಘ, ಸಂಸ್ಥೆಗಳ ನೋಂದಣಿ/ನವೀಕರಣ ಮತ್ತು ಆಡಿಟ್‌ಗಾಗಿ ಸಂಪರ್ಕಿಸಿ**
99009 17161

**ಮನೆ ಬಾಡಿಗೆಗಿದೆ**
3BHK East Facing, ಗ್ರೌಂಡ್ ಫ್ಲೋರ್ 10 ನೇ ಕ್ರಾಸ್ ಎಂ.ಸಿ.ಸಿ 'ಎ' ಬ್ಲಾಕ್
ಮೊ: 98444 06587

**ವಧು ಬೇಕಾಗಿದೆ**
ಆಸ್ತಿ, ಜಮೀನು ಹೊಂದಿರುವ ಒಬ್ಬನೇ ಮಗನಿರುವ 35 ವರ್ಷದ ಸಾಧುಲಿಂಗಾಯತ ವರನಿಗೆ 35 ವರ್ಷದೊಳಗಿನ ಸಾಧು ಲಿಂಗಾಯತ ವಧು ಬೇಕಾಗಿದೆ.
74835 71646, 97424 48252

**WANTED**
SALES MAN, OFFICE BOY
Contact: KRUSHI TARPAULIN
Near ICICI BANK, P.B. ROAD DAVANAGERE
Mob. 9108711555
email: krushiagrotex@gmail.com

**ಬೆಕ್ಕಿನ ಮರಿ ಬೇಕಾದರೆ ಕರೆ ಮಾಡಿ**
ಫೋ. : 63635 52021
96864 62502

**ಹೊಲಗಳು ಮಾರಾಟಕ್ಕಿವೆ**
ಅರಸಾಪುರ 11 ಎಕರೆ, ಆನಗೋಡು 5 ಎಕರೆ, ಬಿಸಲೇರಿ 1.5 ಎಕರೆ, ಮತ್ತಿಹಳ್ಳಿ 14 ಎಕರೆ, ಕಕ್ಕರಗೊಳ್ಳ 2 ಎಕರೆ, ಗ್ಲಾಸ್ ಹೌಸ್ ಪಕ್ಕ 2 ಎಕರೆ
86181 82332

**ಬೇಕಾಗಿದ್ದಾರೆ**
ಹೋಟೆಲ್ ನಲ್ಲಿ ಕೆಲಸ ಮಾಡಲು ಕ್ಲೀನರ್ ಮತ್ತು ಸಪ್ಲೈಯರ್ ಬೇಕಾಗಿದ್ದಾರೆ. ಸಂಪರ್ಕಿಸಿ:
ಪವಾರ್ ಫ್ಯಾಮಿಲಿ ರೆಸ್ಟೋರೆಂಟ್
ಸಿತಾರ ಹೋಟೆಲ್ ಪಕ್ಕ, ಪಿ.ಬಿ.ರಸ್ತೆ, ದಾವಣಗೆರೆ.
ಮೊ:93410 83995

**REQUIRED**
India's largest Financial Company is offering Income Opportunity for Senior Citizens, Retired Teachers / Lecturers / Bankers, Doctors, Businessmen and Home Makers with Fixed Payout and Incentives.
Call : 94494 04209

BASIC, DTP, PHOTOSHOP
ತಿಂಗಳಿಗೆ 400/- ಮಾತ್ರ.
Offer Ends on 28 April
M: 97426 10385

**ಜಮೀನು ಮಾರಾಟಕ್ಕಿದೆ**
ದಾವಣಗೆರೆಯಿಂದ 5 ಕಿ . ಮೀ ಹತ್ತಿರ ಪುಟಗನಾಳ್ ಗ್ರಾಮಕ್ಕೆ ಹೊಂದಿಕೊಂಡಂತೆ ಒಂದೂವರೆ ಎಕರೆ ನೀರಾವರಿ ಜಮೀನು ಮಾರಾಟಕ್ಕಿದೆ . ಎಕರೆಗೆ 37 ಲಕ್ಷ ರೂಪಾಯಿ ಆಗುತ್ತದೆ . ಸಂಪರ್ಕಿಸಿ
ಮೊ: 98457 05871
63632 42625

**House To-Let**
2BHK 'Santrupthi' # 1640/66-67, Saraswati Badavane, Davanagere. Veg only
94484 46708

ಶ್ರೀ ಗುರು ಶಾಂತವೀರೇಶ್ವರ ಸೇವಾ ಸಮಿತಿ (ರಿ.)
**ವೀರಶೈವ/ಲಿಂಗಾಯಿತ ವಧು-ವರರ ಅನ್ವೇಷಣಾ ಕೇಂದ್ರ**
(ಕಳೆದ 21ನೇ ವರ್ಷಗಳ ಸೇವೆಯಲ್ಲಿ)
www.lingayathweds.com
ದಾವಣಗೆರೆ, ಶಿವಮೊಗ್ಗ, ಸಾಗರ ಬೆಂಗಳೂರು ಹಾಗೂ 10 ಶಾಖಾ ಕಛೇರಿ ಹೊಂದಿರುವ ನಮ್ಮಲ್ಲಿ ಎಲ್ಲಾ ತರಹದ ವೀರಶೈವ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಸಿದ್ದವೀರಪ್ಪ ಬಡಾವಣೆ, ದಾವಣಗೆರೆ.
ಮೊ: 95135 79130, 80509 52637

**2 BHK House For Lease/Rent**
# 1430 LIC Colony, near, Nutana College
Contact
90089 52333
73382 43777

**ಸೈಟುಗಳು ಮಾರಾಟಕ್ಕಿವೆ**
ದೂಡಾ ಅಪ್ರೂವಲ್ಡ್ ಸೈಟ್‌ಗಳು ಮಾರಾಟಕ್ಕಿವೆ ಯುಗಾದಿ ಹಬ್ಬದ ಪ್ರಯುಕ್ತ ಸುಲಭ ಕಂತುಗಳಲ್ಲಿ Rs 25,000/- ಅಥವಾ 14,500/- ಕಂತು
98441 24217
94481 55202
86603 11021
93431 10009

**ಬೇಕಾಗಿದ್ದಾರೆ**
ಎಸ್.ಎನ್. ಎಂಟರ್‌ಪ್ರೈಸಸ್ ವಾಟರ್ ಪ್ಯೂರಿಫೈಯರ್ ಆಫೀಸ್‌ನಲ್ಲಿ ಟೆಲಿ ಮಾರ್ಕೆಟಿಂಗ್ ಮಾಡಲು ಯುವತಿಯರು (ಅವಿವಾಹಿತ) ಸಂಬಳ 7000 ರಿಂದ 8000/- ಹೆಲ್ಪರ್ ಕೆಲಸಕ್ಕಾಗಿ ಯುವಕರು (ಬೈಕ್ ಹೊಂದಿರಬೇಕು) ಸಂಬಳ 9000 ದಿಂದ 10,000/-
ಟೆಲಿ ಮಾರ್ಕೆಟಿಂಗ್: 80505 -90494
ಹೆಲ್ಪರ್: 99025 04943

**ಹಾಲ್ ಬಾಡಿಗೆಗೆ ಇದೆ**
ಬ್ಯೂಟಿ ಪಾರ್ಲರ್/ಟ್ಯೂಷನ್ಸ್/ಆಫೀಸ್‌ಗಾಗಿ ಫಸ್ಟ್ ಫ್ಲೋರ್‌ನಲ್ಲಿ ಬಾಡಿಗೆಗೆ ಇದೆ. ಮಾಮಾಸ್ ಜಾಯಿಂಟ್ ರೋಡ್, ಕಾರ್ನರ್ ಬಿಲ್ಡಿಂಗ್, ಎಂಸಿಸಿ 'ಬಿ' ಬ್ಲಾಕ್, ದಾವಣಗೆರೆ.
82177 72482

**ಮನೆ ಬಾಡಿಗೆಗಿದೆ**
R.M.C. ಲಿಂಕ್ ರಸ್ತೆ, ಅಥಣಿ ಮಿಲ್ ಎದುರಿಗೆ ಸಿಂಗಲ್ ಬೆಡ್ ರೂಂ ಸುಸಜ್ಜಿತ ಎರಡನೇ ಮಹಡಿ ಮನೆ ಬಾಡಿಗೆಗಿದೆ. ಸಂಪರ್ಕಿಸಿ :
94496 09805

**ಮಾರಾಟಕ್ಕಿದೆ**
ಪ್ರಸಿದ್ದ ಏರಿಯಾದ ಮುಖ್ಯ ರಸ್ತೆಯಲ್ಲಿ 8 ವರ್ಷಗಳಿಂದ ನಡೆಸಿಕೊಂಡು ಬಂದಿರುವ ಸುಸಜ್ಜಿತವಾದ ಸೂಪರ್ ಮಾರ್ಕೆಟ್ ಮಾರಾಟಕ್ಕೆ ಇದೆ.
ಫೋ. : 90086 40109

**M R VENTURES**
ಹೊರ ಗುತ್ತಿಗೆ ಆಧಾರದಲ್ಲಿ ಎಲ್ಲಾ ರೀತಿಯ ಮ್ಯಾನ್ ಪವರ್ ಸಪ್ಲೈ ಮಾಡಲಾಗುವುದು. ಪ್ರತಿಯೊಂದು ಸೌಲಭ್ಯ ನೀಡಲಾಗುವುದು. ಸಂಪರ್ಕಿಸಿ.
9036921415


## ಅಣಜಿ ಎನ್. ಲೀಲಾ ಪಾಟೀಲ್ ನಿಧನ



ಅಣಜಿ ಗ್ರಾಮದ ವಾಸಿ ಶ್ರೀ ಕೆರೆ ಹೊನ್ನಮ್ಮ ವಿದ್ಯಾಸಂಸ್ಥೆಯ ನಿರ್ದೇಶಕರಾಗಿದ್ದ ದಿ. ಎನ್.ಸಿ. ಪಾಟೀಲ್ ಇವರ ಧರ್ಮಪತ್ನಿ

**ಶ್ರೀಮತಿ ಎನ್. ಲೀಲಾ ಪಾಟೀಲ್**

ಇವರು ದಿನಾಂಕ 20.04.2021ರ ಮಂಗಳವಾರ ರಾತ್ರಿ 10.25 ಕ್ಕೆ ನಿಧನರಾದರು. ಮೃತರಿಗೆ 88 ವರ್ಷ ವಯಸ್ಸಾಗಿತ್ತು. ಇಬ್ಬರು ಪುತ್ರರು, ಇಬ್ಬರು ಪುತ್ರಿಯರು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 21.04.2021ರ ಬುಧವಾರ ಬೆಳಿಗ್ಗೆ 10 ಗಂಟೆಗೆ ಅಣಜಿ ಗ್ರಾಮದ ಮೃತರ ಜಮೀನಿನಲ್ಲಿ ನೆರವೇರಲಿದೆ.

**ದುಃಖತಪ್ತ ಕುಟುಂಬ ವರ್ಗ**
89705 26501, 86607 22926


**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು


## ಕಸ್ತೂರಿ ಬಾಯಿ ನಿಧನ



ದಾವಣಗೆರೆ ಎಸ್.ಎಸ್. ಬಡಾವಣೆ 4ನೇ ಮೇನ್, 8ನೇ ಕ್ರಾಸ್ ವಾಸಿ ದಿ. ಹೆಚ್.ಡಿ. ನಾರಾಯಣರಾವ್ ಇವರ ಪತ್ನಿ, ನಿವೃತ್ತ ಕಾರ್ಯ ಪಾಲಕ ಇಂಜಿನಿಯರ್ ಹೆಚ್. ಎನ್ ರಾಜ್ ಇವರ ತಾಯಿಯವರಾದ ಕಸ್ತೂರಿ ಬಾಯಿ (83) ಇವರು ದಿನಾಂಕ 19.04.2021 ರ ಸೋಮವಾರ ಸಂಜೆ 6 ಗಂಟೆಗೆ ನಿಧನರಾದರು. ಇಬ್ಬರು ಪುತ್ರರು, ಇಬ್ಬಬರು ಪುತ್ರಿಯರು, ಅಳಿಯಂದಿರು, ಸೊಸೆಯಂದಿರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 19.04.2021ರ ಸೋಮವಾರ ರಾತ್ರಿ 9.30ಕ್ಕೆ ಶಾಮನೂರು ರುದ್ರಭೂಮಿಯಲ್ಲಿ ನೆರವೇರಿತು.


**ತಕ್ಷಣ ಬೇಕಾಗಿದ್ದಾರೆ**
ಸ್ಯಾಮ್ಸನ್ ಡಿಸ್ಟಿಲರೀಸ್, ದುಗ್ಗಾವತಿ ಹಾಗೂ SS ಆಸ್ಪತ್ರೆ, ಬಾಪೂಜಿ ಆಸ್ಪತ್ರೆ ಹಾಗೂ ದಾವಣಗೆರೆ ಸುತ್ತಮುತ್ತಲು 8 ಗಂಟೆ ಹಾಗೂ 12 ಗಂಟೆ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್ಸ್ ತಕ್ಷಣ ಬೇಕಾಗಿದ್ದಾರೆ. ESI-PF ಸೌಲಭ್ಯ ಇರುತ್ತದೆ.
ಅಸೋಸಿಯೇಟೆಡ್ ಎಂಟರ್ ಪ್ರೈಸಸ್, ದಾವಣಗೆರೆ.
99169 29713, 90605 45500, 97390 89022

**ಬೇಕಾಗಿದ್ದಾರೆ**
ಕ್ಯಾಷಿಯರ್-1, ಸೇಲ್ಸ್ ಗರ್ಲ್ಸ್ - 5, ಸೇಲ್ಸ್ ಬಾಯ್ಸ್ -5 ಕ್ಲೀನಿಂಗ್-1
ಸಂಪರ್ಕಿಸಿ:
ಗಂಗಾವತಿ ಸಿಲ್ಕ್ ಸ್ಯಾರಿ ಸೆಂಟರ್
ಬಿನ್ನಿ ಕಂಪನಿ ರೋಡ್, ದಾವಣಗೆರೆ.

**ಮನೆ/ಆಫೀಸ್ ಶಿಫ್ಟಿಂಗ್**
ಮನೆ ಮತ್ತು ಆಫೀಸ್ ಶಿಫ್ಟಿಂಗ್ ಹಾಗೂ ವಾಟರ್ ಟ್ಯಾಂಕನ್ನು ಮಿಷನ್‌ನಲ್ಲಿ ಕ್ಲೀನ್ ಮಾಡಲಾಗುವುದು.
99863 61250
91132 85992

**ಸಾಲಗಳಿಗೆ ಸಂಪರ್ಕಿಸಿ**
(ಬಡ್ಡಿ ದರ ವಾರ್ಷಿಕ 7% ರಿಂದ ಪ್ರಾರಂಭ)
ಮನೆ ಕಟ್ಟಲು, ಮನೆ ಖರೀದಿ, ಸೈಟ್ ಖರೀದಿ, ಕಟ್ಟಿರುವ ಮನೆಗೆ ಸಾಲ, ಬೇರೆ ಬ್ಯಾಂಕ್‌ನಲ್ಲಿ ತೆಗೆದುಕೊಂಡಿರುವ ಸಾಲ ವರ್ಗಾವಣೆ ಮತ್ತು ಅಧಿಕ ಸಾಲಕ್ಕಾಗಿ ಸಂಪರ್ಕಿಸಿ.
(ಸಂಬಳ ಮತ್ತು ವ್ಯವಹಾರದಾರರಿಗೆ ಮಾತ್ರ)
73385 80345

**JOBS**
MCS ACADEMY
Training & Placement Cell
98444 92888

**ಡಾ|| ಮಹೇಶ್ ರಾಜಶೇಖರಯ್ಯ**
Hematologist ಇವರು
ದಿ. 21-04-2021ರ ಬುಧವಾರ ಬೆಳಿಗ್ಗೆ 10.00 ಗಂಟೆಯಿಂದ ದಾವಣಗೆರೆಯಲ್ಲಿ ಲಭ್ಯವಿರುತ್ತಾರೆ.
ಅನುಗ್ರಹ ಆಸ್ಪತ್ರೆ
ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ.
08192-222292

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು
ಜನತಾ ಡೀಲಕ್ಸ್ ಲಾಡ್ಜ್, ಕೆ.ಎಸ್.ಆರ್.ಟಿ.ಸಿ. ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ.
4 ಮತ್ತು 18ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇಠಿ. ಫೋನ್ : 96322 95561
ಸಮಯ: ಬೆಳಿಗ್ಗೆ 10ರಿಂದ ಮಧ್ಯಾಹ್ನ 2 ರವರೆಗೆ.

**UPS BATTERY & RO PURIFIERS**
Sales & Service
PEACE ENTERPRISES
83100 42490, 99013 18277
98801 56667

**ಮಾಂತ್ರಿಕ ಮೋಡಿ ಬೆಟ್ಟಪ್ಪ**
ನಂ.1 ವಶೀಕರಣ ಸ್ಪೆಷಲಿಸ್ಟ್
ಸ್ತ್ರೀ-ಪುರುಷ ವಶೀಕರಣ, ಗುಪ್ತ ಲೈಂಗಿಕ ದಾಂಪತ್ಯ ಸಮಸ್ಯೆ, ಇಷ್ಟಪಟ್ಟವರು ನಿಮ್ಮಂತಾಗಲು 100% ಶೀಘ್ರದಲ್ಲೇ ಪರಿಹಾರ ಮಾಡುತ್ತಾರೆ. ಫೋನ್ ಮೂಲಕ ಸಂಪರ್ಕಿಸಿ: ಗಾಂಧಿ ಸರ್ಕಲ್, ದಾವಣಗೆರೆ.
96068 18273



## ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 20.04.2021 ರಂದು ನಿಧನರಾದ ಅಣಜಿ ಗ್ರಾಮದ ವಾಸಿ ಶ್ರೀ ಕೆರೆ ಹೊನ್ನಮ್ಮ ವಿದ್ಯಾಸಂಸ್ಥೆಯ ನಿರ್ದೇಶಕರಾಗಿದ್ದ ದಿ. ಎನ್.ಸಿ. ಪಾಟೀಲ್ ಇವರ ಧರ್ಮಪತ್ನಿ **ಶ್ರೀಮತಿ ಎನ್. ಲೀಲಾ ಪಾಟೀಲ್** ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ. ಮೃತರ ಆತ್ಮಕ್ಕೆ ಚಿರ ಶಾಂತಿ ನೀಡಲೆಂದು ಹಾಗೂ ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಮೃತರ ಕುಟುಂಬ ವರ್ಗಕ್ಕೆ ನೀಡಲೆಂದು ಭಗವಂತನಲ್ಲಿ ಪ್ರಾರ್ಥನೆ.

**ಎಸ್.ಕೆ. ಚಂದ್ರಶೇಖರ್** ಅಣಜಿ
ಅಧ್ಯಕ್ಷರು, ಎಪಿಎಂಸಿ, ದಾವಣಗೆರೆ.
**ಹಾಗೂ ಅಣಜಿ ಗ್ರಾಮಸ್ಥರು**

## ಕೃಷ್ಣೋಜಿರಾವ್ ನಿಧನ



ದಾವಣಗೆರೆ ಆಂಜನೇಯ ಬಡಾವಣೆ 5ನೇ ಮೇನ್, 5ನೇ ಕ್ರಾಸ್ ವಾಸಿ **ಕೃಷ್ಣೋಜಿರಾವ್** ಇವರು ದಿನಾಂಕ 20.04.2021ರ ಮಂಗಳವಾರ ಸಂಜೆ 5 ಗಂಟೆಗೆ ನಿಧನರಾದರು. ಮೃತರಿಗೆ 75 ವರ್ಷ ವಯಸ್ಸಾಗಿತ್ತು. ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ, ಸೊಸೆ, ಅಳಿಯ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 21.04.2021ರ ಬುಧವಾರ ಮಧ್ಯಾಹ್ನ 12 ಗಂಟೆಗೆ ಪಿ.ಬಿ. ರಸ್ತೆಯಲ್ಲಿರುವ ವೈಕುಂಠಧಾಮದಲ್ಲಿ ನೆರವೇರಲಿದೆ.

**ದುಃಖತಪ್ತ ಕುಟುಂಬ ವರ್ಗ, ಮೊ. : 99640 28682**

## ಶರಣ ಟಿ.ಎಂ. ಚನ್ನಬಸಯ್ಯ ನಿಧನ




ದಾವಣಗೆರೆ ಆಂಜನೇಯ ಬಡಾವಣೆ, 10ನೇ ಕ್ರಾಸ್, MES ಕಾನ್ವೆಂಟ್ ಎದುರು ವಾಸಿಯಾದ
**ದಿ|| ಟಿ.ಎಂ. ಕೊಟ್ರಯ್ಯ**
ಇವರ ಮಗ
**ಶರಣ ಟಿ.ಎಂ. ಚನ್ನಬಸಯ್ಯ**
ಇವರು, ದಿನಾಂಕ : 20.04.2021ರ ಮಂಗಳವಾರ ಮಧ್ಯಾಹ್ನ 12.30 ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ಮೃತರಿಗೆ 86 ವರ್ಷ ವಯಸ್ಸಾಗಿತ್ತು. ಓರ್ವ ಪುತ್ರ, ಮೂವರು ಪುತ್ರಿಯರು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ತೆಲಗಿಮಠದ ವಂಶಸ್ಥರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ : 21.04.2021ರ ಬುಧವಾರ ಬೆಳಿಗ್ಗೆ 10.00 ಗಂಟೆಗೆ ಶಾಮನೂರು ಹಿಂದೂ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗ**
ಮತ್ತು ಬಂಧು-ಮಿತ್ರರು, ಫೋ. : 9886726258

## ಭಾವಪೂರ್ಣ ಶ್ರದ್ಧಾಂಜಲಿ



ಹಿರಿಯರೂ, ಮಾರ್ಗದರ್ಶಕರಾದ
**ಶ್ರೀ ಪ್ರೇಮ್‌ಜೀ ಹಂಸರಾಜ್ ಪಟೇಲ್**
ಅವರ ನಿಧನಕ್ಕೆ ಭಾವಪೂರ್ಣ ಶ್ರದ್ಧಾಂಜಲಿ ಕೋರುತ್ತಾ, ಮೃತರ ಆತ್ಮಕ್ಕೆ ಚಿರಶಾಂತಿ ಸಿಗಲೆಂದು ಹಾಗೂ ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ದಯಪಾಲಿಸಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

ಶ್ರೀ ಕರಿಬಸವೇಶ್ವರ ವುಡ್ ಇಂಡಸ್ಟ್ರೀಸ್
ಶ್ರೀ ಮಲ್ಲಿಕಾರ್ಜುನ ಸಾಮಿಲ್ಸ್
ಶ್ರೀ ಜಯಂತ್ ಪ್ಲೇವುಡ್ ಅಂಡ್ ಹಾರ್ಡ್‌ವೇರ್ಸ್
ಶ್ರೀ ಸ್ವಾಗ್ಸ್ ಇಂಡಸ್ಟ್ರೀಸ್
ಶ್ರೀ ವಿನಾಯಕ ವುಡ್ ಇಂಡಸ್ಟ್ರೀಸ್
ಶ್ರೀ ಬಸವೇಶ್ವರ ಸಾಮಿಲ್
ಶ್ರೀ ಮಲ್ಲಿಕಾರ್ಜುನ ವುಡ್ ಇಂಡಸ್ಟ್ರೀಸ್

# ಜಗಳೂರು : ಮಾಸ್ಕ್ ಇಲ್ಲದವರಿಗೆ ದಂಡ



ಜಗಳೂರು, ಏ.20- ಪಟ್ಟಣದಲ್ಲಿ ಇಂದು ಸಂಚಾರಿ ನಿಯಮಗಳನ್ನು ಉಲ್ಲಂಘಿಸಿದ ವಾಹನ ಸವಾರರಿಗೆ ಮತ್ತು ಮಾಸ್ಕ್ ಇಲ್ಲದೆ ರಸ್ತೆಗಿಳಿದವರಿಗೆ ಪೊಲೀಸರು ದಂಡ ವಿಧಿಸಿ ಜಾಗೃತಿ ಮೂಡಿಸಿದರು.

ಪಟ್ಟಣದಲ್ಲಿ ದಿನದಿಂದ ದಿನಕ್ಕೆ ಜನದಟ್ಟಣೆ ಮತ್ತು ವಾಹನಗಳ ಸಂಖ್ಯೆ ಹೆಚ್ಚಾಗುತ್ತಿದ್ದು, ವಾಹನ ಸವಾರರು ವಾಹನಗಳನ್ನು ಎಲ್ಲೆಂದರಲ್ಲಿ ನಿಲ್ಲಿಸಿ ಸಂಚಾರಿ ನಿಯಮ ಉಲ್ಲಂಘಿಸುತ್ತಿದ್ದರು. ಆರಕ್ಷಕ ವೃತ್ತ ನಿರೀಕ್ಷಕ ಮಂಜುನಾಥ್ ಪಂಡಿತ್ ಮತ್ತು ಆರಕ್ಷಕ ಉಪ ನಿರೀಕ್ಷಕ ಸಂತೋಷ್ ಬಾಗೋಜಿ ಮತ್ತು ಪೊಲೀಸ್ ಸಿಬ್ಬಂದಿಗಳು ಇಂದು ಜಗಳೂರು ಪಟ್ಟಣದಲ್ಲಿ ರಸ್ತೆ ಬದಿಯಲ್ಲಿ ಮೂರು ದಿನ ಎಡಭಾಗ ಮತ್ತು ಮೂರು ದಿನ ಬಲಭಾಗಕ್ಕೆ ನಿಲ್ಲಿಸುವಂತೆ ವಾಹನ ಸವಾರರಿಗೆ ಕಾರ್ಯಾಚರಣೆ ಮೂಲಕ ಜಾಗೃತಿ ಮೂಡಿಸಿದರು.

ಇಂದು ಬೆಳಿಗ್ಗೆಯಿಂದ ಪಟ್ಟಣದ ಮಹಾತ್ಮ ಗಾಂಧಿ ವೃತ್ತದ ಬಳಿ ಪೊಲೀಸ್ ಇಲಾಖೆ ವತಿಯಿಂದ ಮಾಸ್ಕ್ ಇಲ್ಲದೆ ದ್ವಿಚಕ್ರ ವಾಹನ ಓಡಿಸುವವರಿಗೆ, ಅನಾವಶ್ಯಕವಾಗಿ ಪಟ್ಟಣದ ತುಂಬಾ ಓಡಾಡುವ ಸಾರ್ವಜನಿಕರಿಗೆ 100 ರೂಪಾಯಿ ದಂಡ ಹಾಕುವ ಮೂಲಕ ಜಾಗೃತಿ ಮೂಡಿಸಲಾಯಿತು. ಪಟ್ಟಣದ ಮರೇನಹಳ್ಳಿ ರಸ್ತೆ ಮತ್ತು ಎನ್‌ಎಂಸಿ ಹೋಟೆಲ್ ಮುಂಭಾಗ, ಡಿಸಿಸಿ ಬ್ಯಾಂಕ್, ನಂದಿನಿ ಹೋಟೆಲ್, ಎಸ್‌ಬಿಎಂ ಬ್ಯಾಂಕ್ ಮುಂಭಾಗ ಸೇರಿದಂತೆ ಪಟ್ಟಣದ ವಿವಿಧ ರಸ್ತೆಗಳಲ್ಲಿ ಎಲ್ಲೆಂದರಲ್ಲಿ ವಾಹನಗಳನ್ನು ಬಿಟ್ಟು ವಾಹನ ಸವಾರರು ಜನಸಾಮಾನ್ಯರಿಗೆ ಕಿರಿಕಿರಿ ಮಾಡುತ್ತಿದ್ದರು .

ರಸ್ತೆಯ ಎರಡೂ ಬದಿಯಲ್ಲಿ ವಾಹನಗಳನ್ನು ನಿಲ್ಲಿಸುವುದರಿಂದ ವಾಹನ ಅಪಘಾತಗಳು ಆಗುತ್ತಿದ್ದವು. ಒಂದು ಕಡೆಯಿಂದ ಮತ್ತೊಂದು ಕಡೆ ಪಾದಚಾರಿಗಳು ತಮ್ಮ ಜೀವವನ್ನು ಕೈಯಲ್ಲಿಟ್ಟುಕೊಂಡು ರಸ್ತೆಯಲ್ಲಿ ನಡೆದುಕೊಂಡು ಹೋಗಬೇಕಾದ ಅನಿವಾರ್ಯತೆ ಇತ್ತು. ಇದನ್ನು ಮನಗಂಡ ಪೊಲೀಸ್ ಇಲಾಖೆ ಈಗ ರಸ್ತೆಯ ಎರಡೂ ಬದಿಯ ಇಕ್ಕೆಲಗಳಲ್ಲಿ ತಮ್ಮ ವಾಹನವನ್ನು ನಿಲ್ಲಿಸುವ ಮಾಲೀಕರಿಗೆ ಐದು ನೂರು ರೂಪಾಯಿ ದಂಡ ಹಾಕುವ ಮೂಲಕ ಸಂಚಾರಿ ನಿಯಮಗಳನ್ನು ಉಲ್ಲಂಘಿಸದಂತೆ ಸವಾರರಿಗೆ ಜಾಗೃತಿ ಮೂಡಿಸಿದರು.

ಈ ಸಂದರ್ಭದಲ್ಲಿ ಸಿಬ್ಬಂದಿಗಳಾದ ಬಸವರಾಜ್, ಟ್ರಾಫಿಕ್ ಪೊಲೀಸ್ ರಮೇಶ್, ಕುಮಾರಸ್ವಾಮಿ ಇನ್ನಿತರರು ಭಾಗವಹಿಸಿದ್ದರು.

# ಕಾಮಗಾರಿ ಮುಗಿಯುವವರೆಗೂ ಅನುದಾನ ನೀಡಬೇಡಿ

## ರಾಣೇಬೆನ್ನೂರು ನಗರಸಭೆ ಸಾಮಾನ್ಯ ಸಭೆಯಲ್ಲಿ ಬಿಜೆಪಿ ಸದಸ್ಯ ಪ್ರಕಾಶ್ ಬುರಡಿಕಟ್ಟಿ ಆಗ್ರಹ



ರಾಣೇಬೆನ್ನೂರು, ಏ.20- ನಗರದಲ್ಲಿ ಕೈಗೊಳ್ಳಲಾಗುತ್ತಿರುವ ನಿರಂತರ ಕುಡಿಯುವ ನೀರು ಸರಬರಾಜು ಯೋಜನೆಯ ನೀರು ಶುದ್ಧೀಕರಣಕ್ಕಾಗಿ ಔಷಧ ಖರೀದಿಸಲು 49.90 ಲಕ್ಷ ರೂಪಾಯಿ ಆಡಳಿತಾತ್ಮಕ ಮಂಜೂರಾತಿ ನೀಡುವುದು ಸರಿಯಲ್ಲ ಎಂದು ಆಡಳಿತ ಬಿಜೆಪಿ ಸದಸ್ಯ ಪ್ರಕಾಶ ಬುರಡಿಕಟ್ಟಿ ಆಕ್ಷೇಪ ವ್ಯಕ್ತಪಡಿಸಿದರು.

ನಗರದ ಗುಡ್ಡದ ಸ್ಮಾರಕ ಭವನದಲ್ಲಿಂದು ಅಧ್ಯಕ್ಷೆ ರೂಪಾ ಚಿನ್ನಿಕಟ್ಟಿ ಅಧ್ಯಕ್ಷತೆಯಲ್ಲಿ ಆಯೋಜಿಸಲಾಗಿದ್ದ ನಗರಸಭೆ ಸಾಮಾನ್ಯ ಸಭೆಯಲ್ಲಿ ಅವರು ಮಾತನಾಡಿದರು.

ಕುಡಿಯುವ ನೀರಿನ ಕಾಮಗಾರಿ ಪೂರ್ಣ ಮುಗಿದಿದೆ ಎಂದು ಅಧಿಕಾರಿಗಳು ಹೇಳುತ್ತಿದ್ದಾರೆ. ಆದರೆ, ಪ್ರತಿ ವಾರ್ಡ್‌ನಲ್ಲೂ 50 ರಿಂದ 60 ಮನೆಗಳಿಗೆ ಇನ್ನೂ ನಲ್ಲಿ ಸಂಪರ್ಕ ನೀಡಿಲ್ಲ. ಪೈಪ್‌ಲೈನ್ ಕೆಲಸ ಬಾಕಿಯಿದೆ. ಆದ್ದರಿಂದ ಸಂಪೂರ್ಣ ಕಾಮಗಾರಿ ಮುಗಿಯುವವರೆಗೂ ಅವರಿಗೆ ಯಾವುದೇ ಅನುದಾನ ನೀಡಬಾರದು ಎಂದು ಪ್ರಕಾಶ ಬುರಡಿಕಟ್ಟಿ ಒತ್ತಾಯಿಸಿದರು.

ಇದಕ್ಕೆ ದನಿಗೂಡಿಸಿದ ಮಲ್ಲಣ್ಣ ಅಂಗಡಿ, ನಿರಂತರ ನೀರು ಪೂರೈಕೆ ಯೋಜನೆ ಕಾಮಗಾರಿ ನಿರ್ವಹಣೆ ಸಂಪೂರ್ಣ ಗುತ್ತಿಗೆದಾರರ ಮೇಲಿದೆ. ಆದರೂ ನಗರಸಭೆಯಿಂದ ಯಾಕೆ ಔಷಧ ನೀಡುತ್ತೀರಿ. ಇಷ್ಟೊಂದು ಹಣ ಕೊಡುವ ಅಗತ್ಯವೇ ಇಲ್ಲ. ಗುತ್ತಿಗೆದಾರರು ಈವರೆಗೂ ಸರಿಯಾಗಿ ಕಾಮಗಾರಿ ಮಾಡಿಲ್ಲ. ಎಲ್ಲೆಂದರಲ್ಲಿ ಪೈಪ್ ಒಡೆಯುತ್ತಿವೆ. ಎಷ್ಟು ಮನೆಗೆ ಸಂಪರ್ಕ ಕಲ್ಪಿಸಿದ್ದಾರೆ ಎಂಬ ಮಾಹಿತಿ ನೀಡಿಲ್ಲ. ಅಧಿಕಾರಿಗಳು ಇದರ ಬಗ್ಗೆ ಮಾಹಿತಿ ನೀಡುತ್ತಿಲ್ಲ. ಆದ್ದರಿಂದ ನಲ್ಲಿ ಸಂಪರ್ಕ ಕೊಟ್ಟಿರುವ ಕುರಿತು ಸರ್ವೇ ಮಾಡಿಸಬೇಕು. ಅಲ್ಲಿಯವರೆಗೆ ನೀರು ಪೂರೈಕೆ ಆರಂಭಿಸಬಾರದು. ಬಿಲ್ ಸಹ ಪಾಸ್ ಮಾಡಬಾರದು ಎಂದು ಒತ್ತಾಯಿಸಿದರು.

ಕಾಂಗ್ರೆಸ್ ಜತೆ ಗುರುತಿಸಿಕೊಂಡಿರುವ ಕೆಪಿಜೆಪಿ ಸದಸ್ಯ ನಿಂಗರಾಜ ಕೋಡಿಹಳ್ಳಿ ಮಾತನಾಡಿ, ಕೊರೊನಾ ಬಗ್ಗೆ ಮುಂಜಾಗ್ರತೆ ಕ್ರಮವಾಗಿ ನಗರದಲ್ಲಿ ಏನು ಮಾಡಲಾಗಿದೆ? ಪೌರ ಕಾರ್ಮಿಕರ ರಕ್ಷಣೆಗಾಗಿ ಯಾವ ಕ್ರಮ ಅನುಸರಿಸಲಾಗುತ್ತಿದೆ ಎಂಬ ಕುರಿತು ಸಭೆಗೆ ಮಾಹಿತಿ ನೀಡಬೇಕು ಎಂದು ಒತ್ತಾಯಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ರೂಪಾ ಚಿನ್ನಿಕಟ್ಟಿ, ಸರಕಾರದ ಆದೇಶದ ಪ್ರಕಾರ ಎಲ್ಲ ಕ್ರಮ ಕೈಗೊಳ್ಳಲಾಗಿದೆ. ಮಾಸ್ಕ್ ಹಾಕದವರಿಗೆ ದಂಡ ವಿಧಿಸಲಾಗುತ್ತಿದೆ ಎಂದರು.

ಉಪಾಧ್ಯಕ್ಷೆ ಕಸ್ತೂರಿ ಚಿಕ್ಕಬಿದರಿ, ಆಯುಕ್ತ ಡಾ. ಎನ್. ಮಹಾಂತೇಶ ಹಾಗೂ ಎಲ್ಲ ಸದಸ್ಯರು, ಅಧಿಕಾರಿಗಳು ಉಪಸ್ಥಿತರಿದ್ದರು.

ಸಭೆ ಆರಂಭಕ್ಕೂ ಮುನ್ನ ಬಿಜೆಪಿ ಜತೆ ಗುರುತಿಸಿಕೊಂಡಿರುವ ಕೆಪಿಜೆಪಿ ಸದಸ್ಯ ಸಿದ್ದಪ್ಪ ಬಾಗಿಲವರ ಅವರನ್ನು ಸ್ಥಾಯಿ ಸಮಿತಿ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆ ಮಾಡಲಾಯಿತು.

# ದೇಶವ್ಯಾಪಿ ಲಾಕ್‌ಡೌನ್ ಇಲ್ಲ

**(1ನೇ ಪುಟದಿಂದ)** ಕಳೆದ ವರ್ಷ ಸೋಂಕಿನ ಬಗ್ಗೆ ತಿಳಿದಿರಲಿಲ್ಲ. ಕಳೆದ ವರ್ಷ ದೇಶದಲ್ಲಿ ಕೊರೊನಾ ಲಸಿಕೆಯಾಗಲೀ, ಪಿಪಿಇ ಕಿಟ್ ಉತ್ಪಾದಿಸುವ ಮೂಲಭೂತ ಸೌಲಭ್ಯವಾಗಲೀ, ಇತರೆ ಅತ್ಯಗತ್ಯ ವೈದ್ಯಕೀಯ ಸರಕುಗಳಾಗಲೀ ಇರಲಿಲ್ಲ. ಈಗ ಪರಿಸ್ಥಿತಿ ಬದಲಾಗಿದೆ ಎಂದಿದ್ದಾರೆ.

20 ನಿಮಿಷಗಳ ಕಾಲ ಮಾತನಾಡಿದ ಅವರು, ಸದ್ಯಕ್ಕೆ ದೇಶವ್ಯಾಪಿ ಲಾಕ್‌ಡೌನ್ ಹೇರುವ ಸಾಧ್ಯತೆ ತಳ್ಳಿ ಹಾಕಿದ್ದಾರೆ. ಕಳೆದ ವರ್ಷ ಹೇರಿದ ಲಾಕ್‌ಡೌನ್‌ನಿಂದ ದೇಶದಲ್ಲಿ ಮಹಾ ವಲಸೆ ಉಂಟಾಗಿತ್ತು ಹಾಗೂ ಆರ್ಥಿಕತೆಗೆ ಭಾರೀ ಹೊಡೆತ ಬಿದ್ದಿತ್ತು.

ಈಗಿನ ಪರಿಸ್ಥಿತಿಯಲ್ಲಿ ದೇಶವನ್ನು ಲಾಕ್‌ಡೌನ್‌ನಿಂದ ಕಾಪಾಡಬೇಕಿದೆ. ರಾಜ್ಯಗಳು ಲಾಕ್‌ಡೌನ್ ಅನ್ನು ಕೊನೆಯ ಅಸ್ತ್ರವಾಗಿ ಬಳಬೇಕು. ಲಾಕ್‌ಡೌನ್ ತಪ್ಪಿಸಲು ಗರಿಷ್ಠ ಪ್ರಯತ್ನ ಪಡಬೇಕು. ನಮ್ಮ ಗಮನ ಮೈಕ್ರೋ ಕಂಟೈನ್‌ಮೆಂಟ್ ವಲಯಗಳ ಕಡೆ ಇರಬೇಕು. ಕೊರೊನಾ ಶಿಷ್ಟಾಚಾರಗಳನ್ನು ಸರಿಯಾಗಿ ಪಾಲಿಸಿದರೆ ಲಾಕ್‌ಡೌನ್ ಪ್ರಶ್ನೆಯೇ ಉದ್ಭವಿಸುವುದಿಲ್ಲ ಎಂದು ಪ್ರಧಾನಿ ಹೇಳಿದ್ದಾರೆ.

ದೆಹಲಿ ಸೇರಿದಂತೆ ಹಲವಾರು ರಾಜ್ಯಗಳು ಲಾಕ್‌ಡೌನ್ ಕ್ರಮಗಳನ್ನು ತೆಗೆದುಕೊಳ್ಳುತ್ತಿರುವ ಹಿನ್ನೆಲೆಯಲ್ಲಿ ಪ್ರಧಾನಿ ಹೇಳಿಕೆ ಪ್ರಾಮುಖ್ಯತೆ ಪಡೆದುಕೊಂಡಿದೆ.

ಉದ್ಯಮಗಳು ಮೋದಿ ಭಾಷಣವನ್ನು ಸ್ವಾಗತಿಸಿದ್ದು, ಕೊರೊನಾ ವಿರುದ್ಧ ಹೋರಾಡಲು ದೇಶಕ್ಕೆ ಸರಿಯಾದ ಸಂದೇಶ ದೊರೆತಿದೆ ಎಂದಿದ್ದಾರೆ. ಲಸಿಕೆಗಳ ಕುರಿತೂ ಮಾತನಾಡಿರುವ ಪ್ರಧಾನಿ, ಭಾರತದಲ್ಲಿ ಅತಿ ದೊಡ್ಡ ಲಸಿಕಾ ಅಭಿಯಾನ ನಡೆಯುತ್ತಿದೆ. 12 ಕೋಟಿ ಲಸಿಕೆಯನ್ನು ವೇಗವಾಗಿ ನೀಡಿದ ದೇಶ ಭಾರತವಾಗಿದೆ ಎಂದಿದ್ದಾರೆ. ದೇಶ ಸಂಕಷ್ಟ ಎದುರಿಸುತ್ತಿದೆ. ನಾವು ಪೂರ್ಣ ಬಲದಿಂದ ಹೋರಾಡಬೇಕಿದೆ ಎಂದಿರುವ ಪ್ರಧಾನಿ, ದೇಶದ ಜನರ ಪರಿಶ್ರಮದೊಂದಿಗೆ ಕೊರೊನಾ ವೈರಸ್ ಸೋಲಿಸುವ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

# ಸಭೆಗಳು ಮುಂದೂಡಿಕೆ

ದಾವಣಗೆರೆ, ಏ. 20- ಇದೇ ದಿನಾಂಕ 22 ರ ಗುರುವಾರ ಮಧ್ಯಾಹ್ನ 3 ಗಂಟೆಗೆ ಮತ್ತು 3.30 ಕ್ಕೆ ಕ್ರಮವಾಗಿ ಜಿಲ್ಲಾ ಪಂಚಾಯತ್‌ನ ಸಭಾಂಗಣದಲ್ಲಿ ಏರ್ಪಡಿಸಲಾಗಿದ್ದ ಜಿಲ್ಲಾ ಮಟ್ಟದ ಏಕ ಗವಾಕ್ಷಿ ಸಮಿತಿ ಸಭೆ ಮತ್ತು ಜಿಲ್ಲಾ ಮಟ್ಟದ ರಫ್ತು ಉತ್ತೇಜನಾ ಸಮಿತಿ ಸಭೆಯನ್ನು ಕಾರಣಾಂತರದಿಂದ ಮುಂದೂಡಲಾಗಿದೆ ಎಂದು ಜಿಲ್ಲಾ ಕೈಗಾರಿಕಾ ಕೇಂದ್ರದ ಜಂಟಿ ನಿರ್ದೇಶಕ ಜಯಪ್ರಕಾಶ್ ನಾರಾಯಣ್ ತಿಳಿಸಿದ್ದಾರೆ.

# ಇಂದು ವಿದ್ಯುತ್ ವ್ಯತ್ಯಯ

ಎಸ್.ಎಸ್. ಬಡಾವಣೆ, ಎ ಮತ್ತು ಬಿ ಬ್ಲಾಕ್, ಶಾಂತಿ ಆಲಯ, ಕುಂದುವಾಡ ರಸ್ತೆ, ಅಥಣಿ ಕಾಲೇಜ್ ರಸ್ತೆ, ಅಂಗವಿಕಲರ ಶಾಲೆ, ಒಳಾಂಗಣ ಕ್ರೀಡಾಂಗಣ, ಕರ್ನಾಟಕ ಬ್ಯಾಂಕ್ ಶಾಮನೂರು ರಸ್ತೆ, ಮಹಾ ನಗರಪಾಲಿಕೆ ಕುಡಿಯುವ ನೀರಿನ ಸ್ಥಾವರ, ಬಸವೇಶ್ವರ ಬಡಾವಣೆ, ಮಹಾಲಕ್ಷ್ಮಿ ಬಡಾವಣೆ, ಬಾಲಾಜಿ ನಗರ, ಕುಂದುವಾಡ ಕೆರೆ ಹಾಗೂ ಸುತ್ತಮುತ್ತ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 5ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

# ರಾತ್ರಿ ಕರ್ಫ್ಯೂ

**(1ನೇ ಪುಟದಿಂದ)** ಅವಕಾಶ ಇರಲಿದೆ. ಕೊರೊನಾ ನಿಯಂತ್ರಣಕ್ಕಾಗಿ ಲಾಕ್‌ಡೌನ್ ಹೇರಿಕೆ ಮಾಡುವಂತೆ ತಜ್ಞರ ಸಮಿತಿ ರಾಜ್ಯ ಸರ್ಕಾರಕ್ಕೆ ಶಿಫಾರಸ್ಸು ಮಾಡಿತ್ತು. ಆದರೆ, ಲಾಕ್‌ಡೌನ್‌ಗೆ ರಾಜ್ಯ ಸರ್ಕಾರ ಒಲವು ತೋರಿಲ್ಲ. ಅಲ್ಲದೇ, ಪ್ರಧಾನಿ ಮೋದಿ ಅವರೂ ಸಹ ಲಾಕ್‌ಡೌನ್ ಕಡೆಯ ಅಸ್ತ್ರವಾಗಬೇಕು ಎಂದು ಹೇಳಿರುವುದು ಗಮನಾರ್ಹವಾಗಿದೆ.

# ಮುಷ್ಕರಕ್ಕೆ ಸಮಯವಲ್ಲ

**(1ನೇ ಪುಟದಿಂದ)** ಬಸ್ ಸಂಚಾರ ಇಲ್ಲದೇ ಕಷ್ಟ ಪಡುವಂತಾಗಿದೆ ಎಂದು ನ್ಯಾಯಾಲಯ ತಿಳಿಸಿದೆ.

ಕೋರ್ಟ್ ಆದೇಶದ ಬಗ್ಗೆ ಪ್ರತಿಕ್ರಿಯಿಸಿದ ಸಾರಿಗೆ ನೌಕರರ ಒಕ್ಕೂಟದ ಗೌರವ ಅಧ್ಯಕ್ಷ ಕೋಡಿಹಳ್ಳಿ ಚಂದ್ರಶೇಖರ್, ನ್ಯಾಯಾಲಯದ ಆದೇಶವನ್ನು ಗೌರವಿಸುತ್ತೇವೆ ಎಂದು ಹೇಳಿದರು.

# ಕೊರೊನಾ ನಿಯಮಗಳನ್ನು ಪಾಲಿಸಿ

## ಸಾರ್ವಜನಿಕರಲ್ಲಿ ಶಾಸಕ ಎಸ್.ರಾಮಪ್ಪ ಮನವಿ



ಮಲೇಬೆನ್ನೂರು, ಏ.20 - ದೇಶದಲ್ಲಿ ಕೊರೊನಾ 2ನೇ ಅಲೆ ಬಿರುಗಾಳಿಯಂತೆ ಬೀಸುತ್ತಿದ್ದು, ಸಾರ್ವಜನಿಕರು ಎಚ್ಚರ ವಹಿಸಿ, ಸರ್ಕಾರದ ಸೂಚನೆಗಳನ್ನು ಪಾಲಿಸುವಂತೆ ಶಾಸಕ ಎಸ್.ರಾಮಪ್ಪ ಮನವಿ ಮಾಡಿದ್ದಾರೆ.

ಈ ಕುರಿತು ಪತ್ರಿಕಾ ಹೇಳಿಕೆ ಬಿಡುಗಡೆ ಮಾಡಿರುವ ಅವರು, ದಾವಣಗೆರೆ ಜಿಲ್ಲೆಯಲ್ಲಿ ಕೊರೊನಾ 2ನೇ ಅಲೆ ದಿನೇ ದಿನೇ ಏರಿಕೆ ಆಗುತ್ತಿದ್ದು, ಹರಿಹರ ತಾಲ್ಲೂಕಿನಲ್ಲಿ ಪ್ರತಿದಿನ ಹೊಸ ಪ್ರಕರಣಗಳು ಪತ್ತೆಯಾಗುತ್ತಿವೆ. ಆದ್ದರಿಂದ ಸಾರ್ವಜನಿಕರು ಅನಾವಶ್ಯಕವಾಗಿ ಮನೆಯಿಂದ ಹೊರಗಡೆ ಬರಬೇಡಿ, ಅನಿವಾರ್ಯವಾದರೆ ಮಾಸ್ಕ್ ಧರಿಸಿ ಸ್ಯಾನಿಟೈಸರ್ ಬಳಸಿ, ಸಾಮಾಜಿಕ ಅಂತರ ಕಾಯ್ದುಕೊಳ್ಳಿ ಎಂದು ಮನವಿ ಮಾಡಿರುವ ಶಾಸಕ ರಾಮಪ್ಪ ಅವರು, ಜೀವ ಉಳಿದರೆ ಬದುಕು ಎಂಬುದನ್ನು ಎಲ್ಲರೂ ಅರ್ಥ ಮಾಡಿಕೊಳ್ಳ ಬೇಕು ಎಂದಿದ್ದಾರೆ.

ಲಾಕ್‌ಡೌನ್ ಮಾಡಿದರೆ ಸಾರ್ವಜನಿಕರಿಗೆ ತೊಂದರೆ ಆಗುತ್ತದೆ ಎಂಬ ದೃಷ್ಟಿಯಿಂದ ಸರ್ಕಾರ ಅದರಿಂದ ದೂರವಿದೆ.

ಆದರೂ ಸರ್ಕಾರ ಜನರ ಹಿತದೃಷ್ಟಿಯಿಂದ ನೈಟ್ ಕರ್ಫ್ಯೂ ಮತ್ತು ಶನಿವಾರ, ಭಾನುವಾರದ ಕರ್ಫ್ಯೂ ಜಾರಿಗೊಳಿಸಲು ತೀರ್ಮಾನಿಸಿರುವುದು ಒಳ್ಳೆಯದು, ಸರ್ಕಾರದ ಮಾರ್ಗಸೂಚಿಗಳನ್ನು ಎಲ್ಲರೂ ತಪ್ಪದೇ ಪಾಲಿಸುವ ಮೂಲಕ ಕೊರೊನಾ ಮಹಾಮಾರಿಯನ್ನು ತಡೆಗಟ್ಟೋಣ ಮತ್ತು ಕೋವಿಡ್ ಲಸಿಕೆಯನ್ನು 45 ವರ್ಷ ಮೇಲ್ಪಟ್ಟವರು ಕಡ್ಡಾಯವಾಗಿ ಹಾಕಿಸಿ ಕೊಳ್ಳಬೇಕು. ಮೇ 1 ರಿಂದ ಸರ್ಕಾರ 18 ವರ್ಷ ಮೇಲ್ಪಟ್ಟ ಎಲ್ಲರಿಗೂ ಕೋವಿಡ್ ಲಸಿಕೆ ನೀಡಲು ನಿರ್ಧರಿಸಿರುವುದು ಸ್ವಾಗತಾರ್ಹ ಎಂದು ಶಾಸಕ ರಾಮಪ್ಪ ಹೇಳಿದ್ದಾರೆ.

# ಜನಸ್ಪಂದನ ಸಭೆ ಮುಂದೂಡಿಕೆ


ದಾವಣಗೆರೆ, ಏ. 20- ಜಿಲ್ಲೆಯಲ್ಲಿ ಕೋವಿಡ್ 19 ಪ್ರಕರಣಗಳು ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ನಾಡಿದ್ದು ದಿನಾಂಕ 22ರ ಗುರುವಾರಂದು ನಡೆಯಬೇಕಿದ್ದ ಜನಸ್ಪಂದನ ಸಭೆಯನ್ನು ಮುಂದೂಡಲಾಗಿದೆ. ಮುಂದಿನ ಸಭೆಯ ದಿನಾಂಕವನ್ನು ನಂತರ ತಿಳಿಸಲಾಗುವುದು ಎಂದು ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ ತಿಳಿಸಿದ್ದಾರೆ.

ಇಂದು ಶ್ರೀ ರಾಮನವಮಿ

# ಬಾಲ ರಾಮಚಂದ್ರನ ಧ್ಯಾನ

ಮುದ್ದು ಮುಖದ ರಾಮಚಂದ್ರ, ಬಂದಿಹ ಧರೆಗೆ

ಮುದ್ದು ಮುಖದ ರಾಮಚಂದ್ರ, ಬಂದಿಹ ಭುವಿಗೆ
ಸದ್ದು ಮಾಡದೆ ತೂಗಿರಿ ತೊಟ್ಟಿಲ ಮೆಲ್ಲಗೆ
ಕದ್ದು ಕದ್ದು ನೋಡದಿರಿ ಬಗ್ಗಿ ಒಳಗೆ
ಮುದ್ದು ಕಂದಗೆ ದೃಷ್ಟಿ ತಾಕೀತು ನಡೆಯಿರಿ ಹೊರಗೆ



ತೂಗಿದಳು ಕೌಸಲ್ಯೆ ಶ್ರೀರಾಮನ
ತೂಗಿದಳು ಸುಮಿತ್ರೆ ಲಕ್ಷ್ಮಣನನ್ನ
ತೂಗಿದಳು ಕೈಕೇಯಿ ಭರತನನ್ನ
ತೂಗಿದನು ದಶರಥನು
ಶತೃಘ್ನನನ್ನ

ತುಂಬಿತು ಅಯೋಧ್ಯೆನಗರ
ಸಂಭ್ರಮದಿಂದ
ಬಂದಿತು ಆನಂದಸುಧೆಯು ಮಕ್ಕಳಿಂದ
ಕುಂದಿತು ದುಷ್ಟ ಶಕ್ತಿ ರಾಮನಾಗಮದಿಂದ
ತಂದಿತು ಹೊಸ ಉಲ್ಲಾಸ ನಗುವಿನಿಂದ

ಚಂದ್ರಬಿಂಬ ದಂತೆ ರಾಮನ ಮೊಗವು
ಮಂದಹಾಸವಂತೂ ಅರಳಿದ ಪದ್ಮವು
ಚೆಂದ ಕಂಗಳಲ್ಲಿ ಅಲೌಕಿಕ ತೇಜವು
ಮುಂಗುರುಳಿನಲ್ಲಿ ಮೋಹಕ ಸೆಳೆತವು

ಬಂದವರು ಸ್ತಬ್ಧವಾಗಿ ನಿಂತುಬಿಟ್ಟರು
ಕಂಗಳ ಮಿಟುಕಿಸದೆ ನೋಡುತ ನಿಂದರು
ಸುಂದರ ಚಿದಾನಂದರೂಪಕೆ ಮಾರುಹೋದರು
ಅಂದು ಆನಂದದಿಂದ ಕುಣಿದಾಡಿದರು

ಮರ್ಯಾದಾ ಪುರುಷೋತ್ತಮನ ಬಾಲ ರೂಪವು
ಸೂರ್ಯೋದಯದಂತೆ ಜಗಕಾನಂದವು
ಆರ್ಯ ಋಷಿಗಳೆಲ್ಲ ಬಂದು ದರ್ಶನ ಪಡೆದರು
ಸಿರಿಹರಿ ಶ್ರೀ ರಾಮನ ತೂಗಿ ನಲಿದರು

- ಶ್ರೀ ಕೃಷ್ಣಾರ್ಪಣಮಸ್ತು, ರೂಪಶ್ರೀ ಶಶಿಕಾಂತ್

## ಅಖಿಲ ಭಾರತ ಬ್ಯಾಂಕ್ ನೌಕರರ ಸಂಘದ 76ನೇ ಸ್ಥಾಪನಾ ದಿನಾಚರಣೆ

# ಕೆನರಾ ಬ್ಯಾಂಕ್ ನೌಕರರಿಂದ ಮಾಸ್ಕ್ ವಿತರಣೆ




ದಾವಣಗೆರೆ, ಏ.20- ಕೆನರಾ ಬ್ಯಾಂಕ್ ಎಂಪ್ಲಾಯೀಸ್ ಯೂನಿಯನ್ ವತಿಯಿಂದ ಬ್ಯಾಂಕ್ ಗ್ರಾಹಕರು, ಪುಟ್‌ಪಾತ್ ವ್ಯಾಪಾರಸ್ಥರಿಗೆ ಮಾಸ್ಕ್ ಹಾಗೂ ಸಾನಿಟೈಸರ್ ವಿತರಣೆ ಮಾಡುವ ಮೂಲಕ ಅಖಿಲ ಭಾರತ ಬ್ಯಾಂಕ್‌ನೌಕರರ ಸಂಘದ 76ನೇ ಸ್ಥಾಪನಾ ದಿನವನ್ನು ನಗರದಲ್ಲಿಂದು ಆಚರಿಸಲಾಯಿತು.

ಕೆನರಾ ಬ್ಯಾಂಕ್‌ನ ಮಂಡಿಪೇಟೆ, ವಿದ್ಯಾನಗರ ಶಾಖೆಯಲ್ಲಿ ಬ್ಯಾಂಕ್ ಗ್ರಾಹಕರಿಗೆ ಹಾಗೂ ಪುಟ್‌ಪಾತ್ ವ್ಯಾಪಾರಿಗಳಿಗೆ ಮಾಸ್ಕ್ ಹಾಗೂ ಸಾನಿಟೈಸರ್ ನೀಡುವ ಮೂಲಕ ಹಾಗೂ ಕೊರೊನಾ ಸಾಂಕ್ರಾಮಿಕ ರೋಗದ ತಿಳಿವಳಿಕೆ ಮೂಡಿಸಲಾಯಿತು.

ಯೂನಿಯನ್‌ನ ರಾಜ್ಯ ಉಪಾಧ್ಯಕ್ಷ ಕೆ. ರಾಘವೇಂದ್ರ ನಾಯರಿ ಮಾತನಾಡಿ, ಅಖಿಲ ಭಾರತ ಬ್ಯಾಂಕ್ ನೌಕರರ ಸಂಘವು ಬ್ಯಾಂಕ್ ಉದ್ಯೋಗಿಗಳ ಪ್ರಪ್ರಥಮ ಸಂಘಟನೆಯಾಗಿ ಸ್ಥಾಪನೆಗೊಂಡಿತು.

ಸ್ಥಾಪನೆಯಾದ ದಿನದಿಂದಲೂ ಬ್ಯಾಂಕ್ ಉದ್ಯೋಗಿಗಳ ಪರವಾಗಿ ಹೋರಾಟ ಮಾಡಿ ಬ್ಯಾಂಕ್ ನೌಕರರಿಗೆ ಅನೇಕ ಸೌಲಭ್ಯಗಳನ್ನು ನೀಡುವಲ್ಲಿ ಪ್ರಮುಖ ಪಾತ್ರವನ್ನು ವಹಿಸಿದೆ ಎಂದರು.

ಬ್ಯಾಂಕಿಂಗ್ ಸೌಲಭ್ಯವು ಪ್ರತಿಯೊಬ್ಬ ಭಾರತೀಯನ ಮೂಲಭೂತ ಹಕ್ಕಾಗಬೇಕು. ಸಾರ್ವಜನಿಕ ವಲಯದ ಬ್ಯಾಂಕುಗಳು ಗಳಿಸುವ ಲಾಭವು ದೇಶದ ಜನರ ಕಲ್ಯಾಣಕ್ಕಾಗಿ ವಿನಿಯೋಗಿಸಬೇಕೇ ವಿನಃ ಖಾಸಗಿ ಬಂಡವಾಳಶಾಹಿಗಳ ಲೂಟಿಗಾಗಿ ಅಲ್ಲ ಎನ್ನುವುದು ಅಖಿಲ ಭಾರತ ಬ್ಯಾಂಕ್ ನೌಕರರ ಸಂಘದ ಸ್ಪಷ್ಟವಾದ ನಿಲುವಾಗಿದೆ. ಇದಕ್ಕಾಗಿ ಸತತವಾಗಿ ಹೋರಾಟ ನಡೆಸಿಕೊಂಡು ಬರಲಾಗುತ್ತಿದೆ ಎಂದು ಹೇಳಿದರು.

ಜಿಲ್ಲಾ ಬ್ಯಾಂಕ್ ನೌಕರರ ಸಂಘದ ಅಧ್ಯಕ್ಷ ಬಿ. ಆನಂದಮೂರ್ತಿ, ಕೆನರಾ ಬ್ಯಾಂಕ್ ವಿದ್ಯಾನಗರ ಶಾಖೆಯ ಮುಖ್ಯ ಪ್ರಬಂಧಕ ಆರ್. ಬಿ.ಸಂಜೀವಪ್ಪ, ಕೆನರಾ ಬ್ಯಾಂಕ್ ವರ್ಕ್ ಮೆನ್ ಎಂಪ್ಲಾಯೀಸ್ ಯೂನಿಯನ್‌ನ ಕೇಂದ್ರ ಸಮಿತಿ ಸದಸ್ಯ ಆರ್.ಆಂಜನೇಯ, ಕೆ.ವಿಶ್ವನಾಥ ಬಿಲ್ಲವ, ಸಿ.ಪರಶುರಾಮ ಹಾಗೂ ಕಾಡಜ್ಜಿ ಎನ್.ವೀರಪ್ಪ, ಕೆ.ಶಶಿಶೇಖರ್, ದಾದಾಪೀರ್. ಸಿದ್ದಲಿಂಗೇಶ್ ಕೋರಿ, ಕೆ. ಸುನಂದಮ್ಮ, ಡಿ.ಎಮ್. ಆನಂದಕುಮಾರ್, ಎಮ್. ಸಂದೀಪ್, ಡಿ.ಎ. ಸಾಕಮ್ಮ, ಬಿ.ಎನ್. ಶ್ವೇತಾ, ಆಶಾ ವಿದ್ಯಾಸಾಗರ್, ದರ್ಶನ್, ಡಿ.ಎ. ರವಿ, ಅಂಬರೀಶ್ ಸೇರಿದಂತೆ ಇತರರು ಇದ್ದರು.

## ಮಾನ್ಯ ಕಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ, ದಾವಣಗೆರೆ ಇವರ ಸನ್ನಿಧಾನದಲ್ಲಿ

ಪಿ ಅಂಡ್‌ಎಸ್‌ಸಿ 6/2021

ಅರ್ಜಿದಾರರು : (1) **ಕೆ.ಎಸ್. ಸಂಜಯ** ಬಿನ್ ಲೇ. ಕೆ.ಎನ್.ಶಾಮಣ್ಣ. ವಯಸ್ಸು 48 ವರ್ಷ, ವಾಸ: ಡೋರ್ ನಂ.2297, 8ನೇ ಮೇನ್ ಎಂ.ಸಿ.ಸಿ 'ಎ' ಬ್ಲಾಕ್, ದಾವಣಗೆರೆ **(2) ಸಪ್ನ ಕೆ.ಎಸ್.** ಕೋಂ ನೀಲಪ್ಪ ಎನ್ ಎಲವಟ್ಟಿ, ವಯಸ್ಸು 47 ವರ್ಷ ನಂ.88, ನೆಲಮಾಳಿಗೆ, 16ನೇ ಮೇನ್, 9ನೇ ಕ್ರಾಸ್, ಬಿಟಿಎಂ ಲೇಔಟ್ ಮೊದಲನೇ ಸ್ಟೇಜ್ ಬೆಂಗಳೂರು ದಕ್ಷಿಣ, ತಾವರಕೆರೆ ಬೆಂಗಳೂರು - ವಿರುದ್ಧ - ಎದುರುದಾರ : ಯಾರೂ ಇಲ್ಲ

**ಸಿವಿಲ್ ಪ್ರಕ್ರಿಯಾ ಸಂಹಿತೆ ಆದೇಶ 5, ನಿಯಮ 20ಎ ರಡಿಯಲ್ಲಿ ಪ್ರತಿವಾದಿಗೆ ಹೊರಡಿಸಲಾದ ಪತ್ರಿಕಾ ಸಮನ್ಸು ಏನೆಂದರೆ-**

ಮೇಲ್ಕಂಡ ಅರ್ಜಿದಾರರು ಈ ಅರ್ಜಿಯನ್ನು ಭಾರತೀಯ ಉತ್ತರಾಧಿಕಾರಿ ಅಧಿನಿಯಮದ ಕಲಂ 372 ರಡಿಯಲ್ಲಿ ಸಲ್ಲಿಸಿ, ಮೃತ ಕೆ.ಎನ್.ಶಾಮಣ್ಣ, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಇಲ್ಲಿ ರೂ.25,000 ಸಾವಿರಗಳನ್ನು ಎಫ್ ಡಿ ಮಾಡಿದ್ದು ಅದಕ್ಕೆ ಸಂಬಂಧಿಸಿದಂತೆ ಅರ್ಜಿದಾರರು ಮೃತನ ವಾರಸುದಾರರೆಂದು, ಎಫ್ ಡಿ ಹಣ ಪಡೆಯಲು ಕೋರಿ ಮಾನ್ಯ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುತ್ತಾರೆ. ಮಾನ್ಯ ನ್ಯಾಯಾಲಯವು ಪ್ರಕರಣವನ್ನು ದಾಖಲಿಸಿಕೊಂಡು ಮೃತ ಕೆ.ಎನ್.ಶಾಮಣ್ಣ ಇವರಿಗೆ ಸಂಬಂಧಿಸಿದಂತೆ ಅರ್ಜಿದಾರನನ್ನು ಹೊರತುಪಡಿಸಿ ಬೇರೆ ಯಾರಾದರೂ ವಾರಸುದಾರರು ಇದ್ದಲ್ಲಿ ಪ್ರಕರಣದಲ್ಲಿ ಖುದ್ದಾಗಲೀ ಅಥವಾ ವಕೀಲರ ಮೂಲಕವಾಗಲೀ ದಿನಾಂಕ 27.05.2021ರ ಬೆಳಿಗ್ಗೆ 11 ಗಂಟೆಗೆ ಹಾಜರಾಗಿ ತಮ್ಮ ತಕರಾರು ಏನಾದರೂ ಇದ್ದಲ್ಲಿ ಸಲ್ಲಿಸಬಹುದು. ಇಲ್ಲವಾದಲ್ಲಿ ಪ್ರಕರಣದಲ್ಲಿ ಯಾವುದೇ ತಕರಾರು ಏನೂ ಇಲ್ಲವೆಂದು ತೀರ್ಮಾನಿಸಿ, ಪ್ರಕರಣದ ಮುಂದಿನ ನಡವಳಿಕೆಯನ್ನು ಗಮನಿಸಿ ಆದೇಶಿಸಲಾಗುವುದು.

ನ್ಯಾಯಾಲಯದ ಮೊಹರು ಮತ್ತು ನನ್ನ ಸಹಿಯೊಂದಿಗೆ ನೀಡಲಾಗಿದೆ. 20.04.2021

**ಕೆ.ಬಿ. ಶೈಲಶ್ರೀ**
**ಅರ್ಜಿದಾರರ ಪರ ವಕೀಲರು**
**ದಾವಣಗೆರೆ.**

**ಘನ ನ್ಯಾಯಾಲಯದ ಆದೇಶಾನುಸಾರ,**
**(ಶಿರಸ್ತೇದಾರರು)**
**ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ (ಕಿ.ವಿ)**
**ದಾವಣಗೆರೆ.**

## ಸಾರ್ವಜನಿಕ ಪ್ರಕಟಣೆ

**ವಾದಿ: ಕೆ.ಬಿ. ಮಲ್ಲಪ್ಪ ತಂದೆ ಕೊಂಡಜ್ಜಿ ಭರಮಪ್ಪ, ಕಕ್ಕರಗೊಳ್ಳ (ಪೋ), ದಾವಣಗೆರೆ ತಾ।। ಜಿ।।**

**ಪ್ರತಿವಾದಿ: ಕೆ.ಬಿ. ಪರಮೇಶ್ವರಪ್ಪ ತಂದೆ: ಕೊಂಡಜ್ಜಿ ಭರಮಪ್ಪ (ನಿವೃತ್ತ ಮ್ಯಾನೇಜರ್, ಬಾಪೂಜಿ ಬ್ಯಾಂಕ್, ದಾವಣಗೆರೆ) ಕಕ್ಕರಗೊಳ್ಳ (ಪೋ), ದಾವಣಗೆರೆ ತಾ।। ಜಿ।।**

**ವಿಷಯ : ಕಕ್ಕರಗೊಳ್ಳ ಗ್ರಾಮದ ರಿ.ಸರ್ವೆ ನಂ. 13/2ಕ್ಕೆ ಸಂಬಂಧಿಸಿದಂತೆ.**

ಮಾನ್ಯ ಸಾರ್ವಜನಿಕರಲ್ಲಿ ಈ ಮೂಲಕ ವಾದಿಯಾದ ಕೆ.ಬಿ. ಮಲ್ಲಪ್ಪ ತಂದೆ: ಭರಮಪ್ಪ ಆದ ನಾನು ತಮಗೆ ತಿಳಿಸುವುದೇನೆಂದರೆ, ಸದರಿ ಗ್ರಾಮದ ರಿ.ಸರ್ವೆ ನಂ. 13/2ಕ್ಕೆ ಸಂಬಂಧಿಸಿದ 2-ಎಕರೆ ಜಮೀನನ್ನು 1991 ರಲ್ಲಿ ನನ್ನ ಅಣ್ಣನವರಾದ ಕೆ.ಬಿ. ಪರಮೇಶ್ವರಪ್ಪ ತಂದೆ: ಭರಮಪ್ಪ ಇವರಿಂದ ಖರೀದಿ ಮಾಡಿದ್ದು, ಇಲ್ಲಿಯ ತನಕ ನಾನೇ ಉಳಿಮೆ ಮಾಡಿಕೊಂಡು ಬಂದಿರುತ್ತೇನೆ. ಕಳೆದ 2017 ರಿಂದ ನನ್ನ ಅಣ್ಣನು ಪೂರ್ಣ ಜಮೀನು ನನ್ನದೇ ಎಂದು ಸಾರ್ವಜನಿಕರಲ್ಲಿ ಹೇಳಿಕೊಂಡು ನನಗೆ ಸಬ್‌ರಿಜಿಸ್ಟ್ರಾರ್ ಆಫೀಸಿನಲ್ಲಿ ರಿಜಿಸ್ಟರ್ ಮಾಡಿಸಿಕೊಡದೇ ನನ್ನ ವಿರುದ್ಧ ತಿರುಗಿ ಬಿದ್ದಿದ್ದು ಸದರಿ 02-ಎಕರೆ ಜಮೀನನ್ನು ಮಾರಾಟ ಮಾಡಲು ಹೊರಟಿದ್ದಾರೆ. ಈ ವಿಷಯ ನನ್ನ ಗಮನಕ್ಕೆ ಬಂದಿದ್ದು, ನಾನು ಶ್ರೀ ತರಳಬಾಳು ಜಗದ್ಗುರು ಬೃಹನ್ಮಠ ಸದ್ಧರ್ಮ ನ್ಯಾಯಪೀಠದ ಗಮನಕ್ಕೆ ತಂದಿದ್ದು, ಸುಮಾರು ಬಾರಿ ನ್ಯಾಯಪೀಠಕ್ಕೆ ಹಾಜರಾಗಿ ದಿನಾಂಕ 28.05.2018 ರಲ್ಲಿ ಶ್ರೀಮಠದ ಸ್ವಾಮಿಗಳು ವಾದಿಯಾದ ತನ್ನ ಸ್ವಾಧೀನದಲ್ಲಿರುವ 2-ಎಕರೆ ಜಮೀನಿನಲ್ಲಿ 01-ಎಕರೆಯನ್ನು ಮಾತ್ರ ಪ್ರತಿವಾದಿಯಾದ ಪರಮೇಶ್ವರಪ್ಪ ಇವರಿಗೆ ಬಿಟ್ಟುಕೊಡತಕ್ಕದ್ದು. ಹಾಗೂ ಪ್ರತಿವಾದಿಯು 01-ಎಕರೆ ಜಮೀನನ್ನು ಮಾತ್ರ ಮಲ್ಲಪ್ಪ ಇವರಿಗೆ ರಿಜಿಸ್ಟರ್ ಮಾಡಿಸಿಕೊಡತಕ್ಕದ್ದು ಎಂದು ಶ್ರೀಮಠದ ಸ್ವಾಮಿಗಳು ಸದರಿ ಗ್ರಾಮದ ಶ್ರೀಯುತ ಕೆ.ಜಿ. ಬಸವನಗೌಡ್ರು ಹಾಗೂ ಹೆಚ್.ಡಿ. ಮಹೇಶ್ವರಪ್ಪ ಇವರ ಸಮ್ಮುಖದಲ್ಲಿ ತೀರ್ಪನ್ನು ನೀಡಿರುತ್ತಾರೆ.

ಆದ ಕಾರಣ ವಾದಿಯಾದ ನಾನು ಸಾರ್ವಜನಿಕರಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ಯಾರಾದರೂ ಸದರಿ ಜಮೀನನ್ನು ಖರೀದಿ, ಕರಾರು ಮಾಡಿಸಿಕೊಂಡಲ್ಲಿ ಮುಂದೆ ಆಗುವ ತೊಂದರೆಯನ್ನು ಅನುಭವಿಸಬೇಕಾಗುವುದು ಎಂದು ಸಾರ್ವಜನಿಕರಲ್ಲಿ ಮನವಿ ಮಾಡಿಕೊಳ್ಳುತ್ತೇವೆ.

**ಸ್ಥಳ : ಕಕ್ಕರಗೊಳ್ಳ**
**ದಿನಾಂಕ :**
**ಲಗತ್ತಿಸಿದ ದಾಖಲಾತಿ:**
**1) ಶ್ರೀಮಠದಲ್ಲಿ ತೀರ್ಪು ನೀಡಿದ್ದ ಜೆರಾಕ್ಸ್ ಪ್ರತಿ.**

**ಇಂತಿ ವಾದಿ ಪರವಾಗಿ**
**ಕೆ.ಬಿ. ಮಲ್ಲಪ್ಪ ತಂದೆ ಕೊಂಡಜ್ಜಿ ಭರಮಪ್ಪ**
**ಕಕ್ಕರಗೊಳ್ಳ (ಪೋ.), ದಾವಣಗೆರೆ ತಾ।। ಜಿ।।**
**ಮೊ: 9448261772 / 9113606473**

**B.G. REVANASIDDAPPA, B.A. LL.B.**
Advocate & Notary, Old Court Complex, Near Janatha Bazar, DAVANGERE - 577 002. Cell No. : 9844443122

# ಕೊಕ್ಕನೂರು ಗ್ರಾಮಕ್ಕೆ ಸಿಪಿಐ, ಪಿಎಸ್‌ಐ ಭೇಟಿ

ಮಲೇಬೆನ್ನೂರು, ಏ.20- ಕೊಕ್ಕನೂರು ಗ್ರಾಮಕ್ಕೆ ಮಂಗಳವಾರ ಭೇಟಿ ನೀಡಿದ ಸಿಪಿಐ ಸತೀಶ್, ಪಿಎಸ್‌ಐ ವೀರಬಸಪ್ಪ ಅವರು ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನ ಸಮಿತಿಯವರ ಜೊತೆ ಸಭೆ ನಡೆಸಿ, ರಾಮನವಮಿಯ ಅಂಗವಾಗಿ ಪ್ರತಿವರ್ಷ ಜರುಗುತ್ತಿದ್ದ ರಥೋತ್ಸವವನ್ನು ನಡೆಸದಂತೆ ಮನವಿ ಮಾಡಿದರು.

ಕೊರೊನಾ ಅಲೆ ದಿನೇ ದಿನೇ ಹೆಚ್ಚಾಗುತ್ತಿದ್ದು, ರಥೋತ್ಸವ ನಡೆಸಿದರೆ ಹೊರಗಡೆಯಿಂದ ಭಕ್ತರು ಬಂದು ಹೋಗುವುದರಿಂದ ನಿಮ್ಮ ಗ್ರಾಮಕ್ಕೆ ಕೊರೊನಾ ಹರಡುವ ಸಾಧ್ಯತೆ ಇರುತ್ತದೆ ಎಂದು ಸಿಪಿಐ ಸತೀಶ್ ಗ್ರಾಮಸ್ಥರಿಗೆ ತಿಳಿಸಿದ್ದಾರೆ.

ದೇವಸ್ಥಾನ ಸಮಿತಿಯವರು ಮಾತ್ರ ಹಾಜರಿದ್ದು, ಪೂಜಾ ವಿಧಿ-ವಿಧಾನಗಳನ್ನು ಮಾಡಿಕೊಳ್ಳಿ, ಜನಜಾತ್ರೆ ಆಗುವ ಯಾವುದೇ ಆಚರಣೆ ಬೇಡ ಎಂದಾಗ ಗ್ರಾಮಸ್ಥರು ಒಪ್ಪಿಕೊಂಡು, ರಥೋತ್ಸವ ನಡೆಸದಂತೆ ತೀರ್ಮಾನಿಸಿದ್ದಾರೆ ಎಂದು ಹೇಳಲಾಗಿದೆ.

ಕಳೆದ ವರ್ಷವೂ ಲಾಕ್‌ಡೌನ್ ಕಾರಣದಿಂದಾಗಿ ಗ್ರಾಮದಲ್ಲಿ ರಥೋತ್ಸವ ನಡೆದಿರಲಿಲ್ಲ, ಈ ವರ್ಷವೂ ರಥೋತ್ಸವ ರದ್ದು ಮಾಡಿರುವುದು ಗ್ರಾಮಸ್ಥರಲ್ಲಿ ಬೇಸರ ತಂದಿದೆ. ಆದರೂ ಎಲ್ಲರ ಆರೋಗ್ಯ ದೃಷ್ಟಿಯಿಂದ ಅನಿವಾರ್ಯ ಎಂದಿದ್ದಾರೆ.

**ರದ್ದು :** ಹರಳಹಳ್ಳಿ ಆಂಜನೇಯ ಸ್ವಾಮಿ ರಥೋತ್ಸವ, ಹೊಳೆ ಸಿರಿಗೆರೆ, ಕೆ.ಎನ್. ಹಳ್ಳಿಯ ಉಚ್ಚಾಯಗಳನ್ನು ರದ್ದು ಮಾಡುವಂತೆ ನೋಟಿಸ್ ಜಾರಿ ಮಾಡಲಾಗಿದೆ ಎಂದು ಪಿಎಸ್‌ಐ ವೀರಬಸಪ್ಪ ತಿಳಿಸಿದ್ದಾರೆ.

ಸರ್ಕಾರದ ಸೂಚನೆಗಳನ್ನು ಮೀರಿ ರಥೋತ್ಸವ, ಉತ್ಸವಗಳನ್ನು ನಡೆಸಿದರೆ ಅಂಥವರ ಮೇಲೆ ಕೇಸು ದಾಖಲಿಸುವುದಾಗಿ ವೀರಬಸಪ್ಪ ಅವರು ಖಡಕ್ ಎಚ್ಚರಿಕೆ ನೀಡಿದ್ದಾರೆ.


## ಶ್ರೀ ವೀರಮಾಹೇಶ್ವರ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ.,

# 683/2, 8ನೇ ಮುಖ್ಯರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ - 577 002.
ದೂರವಾಣಿ : 08192-259693

## ಸ್ಥಿರ ಸ್ವತ್ತಿನ ಬಹಿರಂಗ ಹರಾಜು ಪ್ರಕಟಣೆ

ಈ ಮೂಲಕ ಯಾವತ್ತೂ ಸಮಸ್ತ ಜನಗಳಿಗೆ ತಿಳಿಯಪಡಿಸುವುದೇನೆಂದರೆ, ಮೇಲ್ಕಂಡ ಸೊಸೈಟಿಯಲ್ಲಿ ಸಾಲವನ್ನು ಪಡೆದು ಮರುಪಾವತಿ ಮಾಡದೇ ಸುಸ್ತಿಯಾಗಿರುವ ಈ ಕೆಳಕಂಡ ಸುಸ್ತಿದಾರರ ವಿರುದ್ಧ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 70ರಡಿಯಲ್ಲಿ ಡಿಕ್ರಿ ಅವಾರ್ಡಿನ ಆದೇಶದ ಪ್ರಕಾರ ಹಾಗೂ ಸಹಕಾರ ಸಂಘಗಳ ಸಹಾಯಕ ನಿಬಂಧಕರು, ದಾವಣಗೆರೆ ಉಪವಿಭಾಗ, ದಾವಣಗೆರೆ ಇವರ ನ್ಯಾಯಾಲಯದಲ್ಲಿ ಅಮಲ್ಜಾರಿ ಹುಕುಂ ಪಡೆದು ಷೆಡ್ಯೂಲ್ ಸ್ವತ್ತನ್ನು ಬಹಿರಂಗ ಹರಾಜು ಮಾಡಲಾಗುತ್ತಿದೆ. ಇಚ್ಚೆಯುಳ್ಳವರು ಹರಾಜಿನಲ್ಲಿ ಭಾಗವಹಿಸಿ, ಅತ್ಯಧಿಕ ಸವಾಲ್ ಮಾಡಿ ಈ ಕೆಳಕಂಡ ಸ್ವತ್ತನ್ನು ಪಡೆಯಬಹುದು.

| ಕ್ರ. ಸಂ. | ತೀರ್ಪು ಸಾಲಗಾರರ ಹೆಸರು ಮತ್ತು ವಿಳಾಸ | ಬಾಕಿಯಾಗಿರುವ ಸಾಲದ ಅಸಲು ಬಡ್ಡಿ ಮತ್ತು ಇತರೆ ಖರ್ಚು | ಹರಾಜಿಗೆ ಒಳಪಡಿಸಿರುವ ಸ್ವತ್ತಿನ ವಿವರ | ಹರಾಜು ನಡೆಯುವ ಸ್ಥಳ ಮತ್ತು ವೇಳೆ |
|---|---|---|---|---|
| 01. | ಶ್ರೀ ಚಂದ್ರಯ್ಯ ಡಿ. ಬಿನ್ ರೇವಣಸಿದ್ದಯ್ಯ, ಮನೆ ಸಂ. 855/56, 1ನೇ ಹಂತ, 2ನೇ ಕ್ರಾಸ್, ಶಿವಕುಮಾರಸ್ವಾಮಿ ಬಡಾವಣೆ, ದಾವಣಗೆರೆ ಇಪಿ ಸಂಖ್ಯೆ : 37/2018-19 | ಅಸಲು ರೂ. 15,81,248=00 + ಈ ತಹಲ್‌ವರೆಗೆ ಬಡ್ಡಿ + ಇತರೆ ಖರ್ಚು ಇದ್ದಲ್ಲಿ | ದಾವಣಗೆರೆ ನಗರದ ಶಿವಕುಮಾರಸ್ವಾಮಿ ಬಡಾವಣೆ, ಒಂದನೇ ಹಂತ, 2ನೇ ಅಡ್ಡರಸ್ತೆ, ಸೈಟ್ ಸಂಖ್ಯೆ 56, ಮನೆ ಹಳೇ ನಂ. 855, ಹಾಲಿ ಡೋರ್ ನಂ. 855/56, ಖಾನೇಷುಮಾರಿ ನಂ. 682 ಇರುವ ಆರ್‌ಸಿಸಿ ಮೇಲ್ಛಾವಣೆ ಹೊಂದಿರುವ ನಾಲ್ಕು ಅಂತಸ್ತಿನ ಮನೆ | ಹರಾಜಿಗೆ ಒಳಪಡಿಸಿರುವ ಸ್ಥಿರಾಸ್ತಿಯ ಮುಂಭಾಗದಲ್ಲಿ ದಿನಾಂಕ 28-04-2021 ನೇ ಬುಧವಾರ ಬೆಳಿಗ್ಗೆ 11.30 ಗಂಟೆಗೆ |

**ಸೂಚನೆ :** (1) ಹರಾಜಿನಲ್ಲಿ ಬಿಡ್ ಸವಾಲು ಮಾಡತಕ್ಕವರು ಹರಾಜಿಗೆ ಮುಂಚೆ ರೂ.25,000=00 ನಗದು ಹಣವನ್ನು ಮಾರಾಟಾಧಿಕಾರಿಗಳವರ ಕಡೆ ಪಾವತಿ ಮಾಡತಕ್ಕದ್ದು. ಸೊಸೈಟಿಯವರು ಭಾಗವಹಿಸಿದಲ್ಲಿ ಸದರಿ ಡಿಪಾಸಿಟ್ ಪಾವತಿ ಮಾಡಬೇಕಾಗಿಲ್ಲ. (2) ಅತ್ಯಧಿಕ ಸವಾಲು ಮಾಡಿ ಸ್ವತ್ತುಗಳನ್ನು ಕೊಳ್ಳುವವರು ಮಾರಾಟಾಧಿಕಾರಿಗಳು ಹರಾಜನ್ನು ಒಪ್ಪಿದ ತಕ್ಷಣ ಹರಾಜು ಮೊಬಲಗಿನ ಶೇಕಡಾ 15ರಷ್ಟು ಹಣವನ್ನು ಆ ಕೂಡಲೇ ಪಾವತಿ ಮಾಡತಕ್ಕದ್ದು. ಉಳಿದ ಹಣವನ್ನು ಮತ್ತು ಸ್ಟಾಂಪ್ ಪೇಪರಿಗೆ ಹಾಗೂ ನೋಂದಣಿಗೆ ತಗಲುವ ವೆಚ್ಚವನ್ನು ಹರಾಜು ಆದ 45 ದಿವಸಗಳೊಳಗೆ ಪಾವತಿ ಮಾಡತಕ್ಕದ್ದು. ತಪ್ಪಿದಲ್ಲಿ ಡಿಪಾಸಿಟ್ ಮೊತ್ತವನ್ನು ಸೊಸೈಟಿಗೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು. (3) ಮಾರಾಟಾಧಿಕಾರಿಗಳು ಹರಾಜನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಅಥವಾ ಯಾವುದೇ ಕಾರಣವನ್ನು ನೀಡದೆ ಮುಂದೂಡುವ ಇಲ್ಲವೇ ರದ್ದುಪಡಿಸುವ ಅಧಿಕಾರವನ್ನು ಹೊಂದಿರುತ್ತಾರೆ. (4) ಈ ಸ್ಥಿರಾಸ್ತಿಯು ಹೇಗಿದೆಯೋ ಹಾಗೆ ಹರಾಜು ಮಾಡಲಾಗುವುದು. (5) ಹರಾಜಿನಲ್ಲಿ ಭಾಗವಹಿಸುವವರು ತಮ್ಮ ಗುರುತಿನ ಚೀಟಿ ಹಾಗೂ ವಿಳಾಸ ದೃಢೀಕರಣ ಪತ್ರವನ್ನು ಒದಗಿಸತಕ್ಕದ್ದು (6) ಹೆಚ್ಚಿನ ಮಾಹಿತಿಗಾಗಿ ಮಾರಾಟಾಧಿಕಾರಿಗಳನ್ನು ಅಥವಾ ಸಂಘದ ಕಾರ್ಯದರ್ಶಿಯವರನ್ನು ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/- ಅಧ್ಯಕ್ಷರು | ಸಹಿ/- ಪ್ರಭಾರ ಕಾರ್ಯದರ್ಶಿ | ಸಹಿ/- ಮಾರಾಟಾಧಿಕಾರಿಗಳು



## ಮಾರ್ಕೆಟಿಂಗ್ ಎಕ್ಸಿಕ್ಯೂಟೀವ್ಸ್ ಬೇಕಾಗಿದ್ದಾರೆ

INS ಮಾನ್ಯತೆ ಹೊಂದಿರುವ ಜಾಹೀರಾತು ಸಂಸ್ಥೆಯಲ್ಲಿ ಕಾರ್ಯ ನಿರ್ವಹಿಸಲು
(ಶಿವಮೊಗ್ಗ & ದಾವಣಗೆರೆ ಜಿಲ್ಲಾ ವ್ಯಾಪ್ತಿ)
ಒಟ್ಟು ಹುದ್ದೆಗಳು – 4
ಕಂಪ್ಯೂಟರ್ ಜ್ಞಾನ ಹೊಂದಿದ್ದು, ಯಾವುದೇ ಪದವಿ/ಡಿಪ್ಲೋಮಾ ಪಡೆದಿರುವ ಆಸಕ್ತ ಸ್ಥಳೀಯ ಮಾರ್ಕೆಟಿಂಗ್ ಎಕ್ಸಿಕ್ಯೂಟೀವ್ ತಕ್ಷಣ ಬೇಕಾಗಿದ್ದಾರೆ.
Attractive Salary + ಸರ್ಕಾರಿ ಸವಲತ್ತು ನೀಡಲಾಗುವುದು

ಆಸಕ್ತರು ಬಯೋಡಾಟಾದೊಂದಿಗೆ
ದಿನಾಂಕ : 24.04.2021 ರಂದು ಈ ಕೆಳಕಂಡ
ಶಿವಮೊಗ್ಗ ಪ್ರಾದೇಶಿಕ ಕಛೇರಿಗೆ ಖುದ್ದಾಗಿ ಸಂಪರ್ಕಿಸಿ

Zenkar ADVERTISING
ISO 9001 : 2015

2ನೇ ಮಹಡಿ, ರೇಖಾ ಆರ್ಕೆಡ್ ಎದುರು,
ತಿಲಕ್‌ನಗರ ಮುಖ್ಯರಸ್ತೆ, ಶಿವಮೊಗ್ಗ.
ಫೋನ್ : 08182 - 295129
ಇಮೇಲ್ : zenkarsmgadvt@gmail.com

# ಲಸಿಕೆ ಉತ್ಪಾದನೆಗೆ ಕೇಂದ್ರದಿಂದ 4,500 ಕೋಟಿ ರೂ. ಮುಂಗಡ ಪಾವತಿ

ನವದೆಹಲಿ, ಏ. 20 - ಕೊರೊನಾ ಲಸಿಕೆ ಉತ್ಪಾದನೆಗೆ ಉತ್ತೇಜನ ನೀಡಲು ಮುಂದಾಗಿರುವ ಕೇಂದ್ರ ಸರ್ಕಾರ, ಸೆರಮ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ ಹಾಗೂ ಭಾರತ್ ಬಯೋಟೆಕ್ ರೀತಿಯ ಲಸಿಕೆ ಉತ್ಪಾದನಾ ಸಂಸ್ಥೆಗಳಿಗೆ 4,500 ಕೋಟಿ ರೂ.ಗಳ ಮುಂಗಡ ಪಾವತಿಗೆ ನಿರ್ಧರಿಸಿದೆ.

ಯೋಜನೆಯ ಅನ್ವಯ ಸೆರಮ್ ಹಾಗೂ ಭಾರತ್ ಬಯೋಟೆಕ್‌ಗಳು ಜುಲೈ ಒಳಗೆ ಸರ್ಕಾರಕ್ಕೆ ಪ್ರತಿ ಲಸಿಕೆಗೆ 150 ರೂ.ಗಳಂತೆ 200 ದಶಲಕ್ಷ ಡೋಸ್ ಲಸಿಕೆ ಪೂರೈಸಲಿವೆ.

ಬ್ಯಾಂಕ್ ಗ್ಯಾರಂಟಿ ರಹಿತವಾಗಿ ಮುಂಗಡ ಪಾವತಿ ಮಾಡಲು ಹಣಕಾಸು ಸಚಿವಾಲಯ ನಿಯಮಗಳನ್ನು ಸಡಿಲಿಸಿದೆ. ಇದು ಲಸಿಕೆ ಉತ್ಪಾದಕರಿಗೆ ನೆರವಾಗಲಿದೆ.

ಸೆರಮ್‌ಗೆ 3,000 ಕೋಟಿ ರೂ. ಹಾಗೂ ಭಾರತ್ ಬಯೋಟೆಕ್‌ಗೆ 1,500 ಕೋಟಿ ರೂ.ಗಳನ್ನು ಮುಂಗಡವಾಗಿ ನೀಡಲಾಗುವುದು.

ಈ ಬಗ್ಗೆ ಮಾಹಿತಿ ನೀಡಿರುವ ಕೇಂದ್ರ ವಾಣಿಜ್ಯ ಸಚಿವ ಪಿಯೂಶ್ ಗೋಯಲ್, ಲಸಿಕೆ ಉತ್ಪಾದಕರಿಗೆ ಸಾಲದ ಆಧಾರದ ಮೇಲೆ ಈ ಹಣ ನೀಡಲಾಗುವುದು. ಈ ನಿರ್ಧಾರಕ್ಕೆ ಸಂಪುಟದ ಅನುಮೋದನೆಯ ಅಗತ್ಯವಿಲ್ಲ ಎಂದಿದ್ದಾರೆ.

ಲಸಿಕೆ ಉತ್ಪಾದನೆ ಸಾಮರ್ಥ್ಯ ಹೆಚ್ಚಿಸಲು 3,000 ಕೋಟಿ ರೂ.ಗಳ ಅಗತ್ಯವಿದೆ ಎಂದು ಸೆರಮ್ ಸಂಸ್ಥೆಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಅದರ್ ಪೂನಾವಾಲಾ ಅವರು ಈ ತಿಂಗಳ ಆರಂಭದಲ್ಲಿ ತಿಳಿಸಿದ್ದರು.

ಈ ನಡುವೆ ಹೇಳಿಕೆ ನೀಡಿರುವ ಭಾರತ್ ಬಯೋಟೆಕ್ ಕಂಪನಿ, ಕೊವ್ಯಾಕ್ಸಿನ್ ಲಸಿಕೆ ಉತ್ಪಾದನೆಯನ್ನು ವಾರ್ಷಿಕ 70 ಕೋಟಿಗೆ ಹೆಚ್ಚಿಸುವುದಾಗಿ ಭಾರತ್ ಬಯೋಟೆಕ್ ತಿಳಿಸಿದೆ.

ಹಂತ ಹಂತವಾಗಿ ಹೈದರಾಬಾದ್ ಮತ್ತು ಬೆಂಗಳೂರು ಘಟಕಗಳಲ್ಲಿ ಲಸಿಕೆ ಉತ್ಪಾದನೆ ಹೆಚ್ಚಿಸಲಾಗುವುದು ಎಂದು ಕಂಪನಿ ಹೇಳಿಕೆಯಲ್ಲಿ ತಿಳಿಸಲಾಗಿದೆ.

ನಿಷ್ಕ್ರಿಯ ವೈರಸ್ ಹೊಂದಿರುವ ಲಸಿಕೆ ಅತ್ಯಂತ ಸುರಕ್ಷಿತವಾಗಿದೆ. ಉತ್ಪಾದನೆ ಸಂಕೀರ್ಣ ಹಾಗೂ ದುಬಾರಿಯಾಗಿದೆ. ಹೀಗಾಗಿ ಸಜೀವ ವೈರಸ್ ಇರುವ ಲಸಿಕೆಗಳಿಗೆ ಹೋಲಿಸಿದರೆ ಉತ್ಪಾದನೆ ಕಡಿಮೆ ಎಂದು ಕಂಪನಿ ತಿಳಿಸಿದೆ.




## ಸರಳವಾಗಿ ಜರುಗಿದ ಬ್ರಹ್ಮರಥೋತ್ಸವ

ಹರಿಹರ ತಾಲ್ಲೂಕಿನ ಕುಣೆಬೆಳಕೆರೆ ಗ್ರಾಮದಲ್ಲಿ ಶ್ರೀ ಆಂಜನೇಯ ಸ್ವಾಮಿ ಬ್ರಹ್ಮರಥೋತ್ಸವ ಸರಳವಾಗಿ ನೆರವೇರಿತು.

# ಮತ್ತೆ ದಿಢೀರ್ ಬೀದಿಗಿಳಿದ ಜಿಲ್ಲಾಧಿಕಾರಿ







ದಾವಣಗೆರೆ, ಏ.20- ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ ಅವರು ಮಂಗಳವಾರವೂ ನಗರದ ವಿವಿಧೆಡೆ ಸಂಚರಿಸಿ ಕೊರೊನಾ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಜನರಲ್ಲಿ ಜಾಗೃತಿ ಮೂಡಿಸಿದರು.

ಮಾಸ್ಕ್ ಹಾಕದವರನ್ನು ಕಂಡ ಜಿಲ್ಲಾಧಿಕಾರಿ ಕೈ ಮುಗಿದು ಮಾಸ್ಕ್ ಧರಿಸುವಂತೆ ಮನವಿ ಮಾಡಿದರು. ಮಾಸ್ಕ್ ಹಾಕದ ಯುವಕನನ್ನು ಏನು ಮಾಡುತಿದ್ದೀ? ಎಂದು ಜಿಲ್ಲಾಧಿಕಾರಿ ಪ್ರಶ್ನಿಸಿದಾಗ, ತಾನು ಬಾತಿಯ ತಪೋವನದಲ್ಲಿ ಅಭ್ಯಾಸ ಮಾಡುತ್ತಿರುವ ವೈದ್ಯ ವಿದ್ಯಾರ್ಥಿ ಎಂಬ ಯುವಕನ ಉತ್ತರಕ್ಕೆ, ನೀವೇ ಹೀಗೆ ಮಾಡಿದರೆ ಹೇಗೆ? ಮಾಸ್ಕ್ ಹಾಕಿಕೊಳ್ಳಿ ಎಂದರು.

**ಕೊರೊನಾ ಮುಗಿದ ಮೇಲೆ ಎಗ್ ರೈಸ್ ತಿನ್ನು:** ಬಾಲಕನೊಬ್ಬ ಎಗ್ ರೈಸ್ ಹೋಟೆಲ್‌ನಲ್ಲಿ ಇದ್ದದ್ದನ್ನು ಕಂಡ ಜಿಲ್ಲಾಧಿಕಾರಿ, ಇಲ್ಲಿ ಸ್ವಚ್ಛತೆ ಇಲ್ಲ ಕೊರೊನಾ ಮುಗಿದ ಮೇಲೆ ಎಗ್ ರೈಸ್ ತಿನ್ನು ಎಂದರು. ನಾನು ಯಾರು ಗೊತ್ತಾ? ಎಂಬ ಜಿಲ್ಲಾಧಿಕಾರಿ ಪ್ರಶ್ನೆಗೆ, ನೀವು ಡಿಸಿ ಸರ್ ಪೇಪರ್‌ನಲ್ಲಿ ನಿಮ್ಮನ್ನು ನೋಡಿದ್ದೇನೆ ಎಂದು ಬಾಲಕ ಉತ್ತರಿಸಿದ.

ಇದೇ ವೇಳೆ ಕೆಲ ಹೋಟೆಲ್‌ಗಳಲ್ಲಿ ಸ್ವಚ್ಛತೆ ಇಲ್ಲದ್ದನ್ನು ನೋಡಿದ ಜಿಲ್ಲಾಧಿಕಾರಿ, ಕೈಗಳಿಗೆ ಗ್ಲೌಸ್ ಬಳಸಿ ಆಹಾರ ಪದಾರ್ಥ ಸರಬರಾಜು ಮಾಡುವಂತೆ ಹೇಳಿದರು. ಬಾಯ್ಸ್ ಹಾಸ್ಟೆಲ್ ರಸ್ತೆಯಲ್ಲಿ ಅಡ್ಡವಾಗಿ ಪಾರ್ಕ್ ಮಾಡಿದ್ದ ಕಾರು ಯಾರದೆಂದು ಜಿಲ್ಲಾಧಿಕಾರಿ ಪ್ರಶ್ನಿಸಿದಾಗ, ವೈದ್ಯರೊಬ್ಬರು ತನ್ನದೆಂದು ಹೇಳಿದ್ದು ಕಂಡ ಡಿಸಿ, ನೀವೇ ಹೀಗೆ ಅಡ್ಡವಾಗಿ ಕಾರು ನಿಲ್ಲಿಸಿದರೆ ತಪ್ಪಲ್ಲವೇ ಶೀಘ್ರವೇ ಪಾರ್ಕಿಂಗ್ ಸ್ಥಳದಲ್ಲಿ ಪಾರ್ಕ್ ಮಾಡಿ ಎಂದು ಹೇಳಿದರು.

ಬಿಐಇಟಿ ರಸ್ತೆ ಬಳಿಯ ಸೂಪರ್ ಮಾರ್ಟ್ ಪ್ರವೇಶಿಸಿದ ಜಿಲ್ಲಾಧಿಕಾರಿ, ಬರುವ ಸಾರ್ವಜನಿಕರಿಗೆ ಸ್ಯಾನಿಟೈಸರ್, ಥರ್ಮಾಮೀಟರ್ ಪರಿಶೀಲನೆ ಮಾಡುವವರು ಇಲ್ಲದ್ದನ್ನು ಕಂಡು, ಕೂಡಲೇ ಈ ಬಗ್ಗೆ ವ್ಯವಸ್ಥೆ ಮಾಡಿಕೊಳ್ಳಿ. ಇಲ್ಲದಿದ್ದರೆ ಮಾರ್ಟ್ ಮುಚ್ಚಿಸಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು. ಅಲ್ಲದೆ, ಅಲ್ಲಿದ್ದ ಪೋಷಕರಿಗೆ ಮಕ್ಕಳನ್ನು ಕರೆ ತರದಂತೆ ಹೇಳಿದರು.

### ಮಾಸ್ಕ್ ಧರಿಸಲು ಸಾರ್ವಜನಿಕರಿಗೆ ಮನವಿ

ಬಿಐಇಟಿ ರಸ್ತೆಯಲ್ಲಿ ಬರುತ್ತಿದ್ದ ಸಾರಿಗೆ ಬಸ್ ಹತ್ತಿದ ಡಿಸಿ, ಬಸ್‌ನಲ್ಲಿ ಮಾಸ್ಕ್ ಹಾಕದೇ ಇದ್ದವರಿಗೆ ಮಾಸ್ಕ್ ನೀಡಿ, ಅಗತ್ಯವಿದ್ದರೆ ಮಾತ್ರ ಹೊರ ಬನ್ನಿ ಎಂದರು. 'ಕೊರೊನಾ ಹೆಚ್ಚಾಗುತ್ತಿದೆ ಡಿಸಿ, ಎಸ್ಪಿ ಏನೂ ಮಾಡ್ತಿಲ್ಲ' ಎಂದು ಕಮೆಂಟ್ ಮಾಡುತ್ತೀರಿ. ಹೊಡೆದರೆ ಹೊಡೀತಾರೆ ಅಂತೀರಿ, ಬೈದರೆ ಬೈತೀರಿ ಅಂತೀರಿ. ದಂಡ ಹಾಕಿದರೆ ಅದಕ್ಕೂ ಏನಾದರೂ ಅಂತೀರಿ. ನೀವು ಮಾತ್ರ ಮಾಸ್ಕ್ ಹಾಕದೆ ಓಡಾಡ್ತೀರಿ ಎಂದು ಜನತೆಗೆ ಬುದ್ಧಿವಾದ ಹೇಳಿದರು.

ನಗರ ಪಾಲಿಕೆ ಸದಸ್ಯ ಗಡಿಗುಡಾಳ್ ಮಂಜುನಾಥ್, ಸಾಮಾಜಿಕ ಕಾರ್ಯಕರ್ತ ಎಂ.ಜಿ. ಶ್ರೀಕಾಂತ್, ಕೆ.ಟಿ. ಗೋಪಾಲಗೌಡ, ರಾಘವೇಂದ್ರ ಚೌಹ್ವಾಣ್, ಜಿಲ್ಲಾಧಿಕಾರಿಗಳ ಆಪ್ತ ಸಹಾಯಕ ಮರುಳಸಿದ್ದಪ್ಪ ಇತರರು ಈ ಸಂದರ್ಭದಲ್ಲಿದ್ದರು.

## ಆಸ್ತಿ ತೆರಿಗೆ ಪಾವತಿ ಅವಧಿ ವಿಸ್ತರಿಸಲು ವಿ.ಪ. ನಾಯಕ ನಾಗರಾಜ್ ಒತ್ತಾಯ



ದಾವಣಗೆರೆ, ಏ.20 - 2021-22ರ ಸಾಲಿನ ಕಂದಾಯ ಪಾವತಿಸಲು ಶೇ. 5ರ ರಿಯಾಯಿತಿ ಇದೇ ತಿಂಗಳು 30ರಂದು ಮುಗಿಯುತ್ತಿದ್ದು, ಇಲ್ಲಿ ತನಕ ಆನ್ ಲೈನ್ ಎಂಟ್ರಿ ಆಗಿರದೇ ಜನಸಾಮಾನ್ಯರಿಗೆ ತೊಂದರೆ ಆಗಿದೆ. ಈ ಕೂಡಲೇ ಸರಿಪಡಿಸಿ ಕೊರೊನಾ 2ನೇ ಅಲೆ ಪ್ರಾರಂಭವಾಗಿದ್ದು, ಗುಂಪು ಗುಂಪಾಗಿ ಆಸ್ತಿ ತೆರಿಗೆ ಪಾವತಿಸಲು ಸಾರ್ವಜನಿಕರು ಪಾಲಿಕೆಗೆ ಬರದ ಹಾಗೆ ಶೇ.5 ರಿಯಾಯಿತಿಯನ್ನು ಮೇ 30ರವರೆಗೆ ವಿಸ್ತರಿಸಲು ಮಹಾಪೌರರು ಸರ್ಕಾರಕ್ಕೆ ಅನುಮತಿ ಪಡೆಯಲು ಮಹಾನಗರ ಪಾಲಿಕೆ ವಿಪಕ್ಷ ನಾಯಕ ಎ. ನಾಗರಾಜ್ ಅವರು ಒತ್ತಾಯಿಸಿದ್ದಾರೆ.

ಆಸ್ತಿ ತೆರಿಗೆಯ ದಂಡ ರಹಿತ ಪಾವತಿಗೆ ಜೂನ್ 30 ಕೊನೆ ಇದ್ದು, ಇದನ್ನು ವಿಸ್ತರಿಸಿ ಸೆಪ್ಟೆಂಬರ್ 30ರವರೆಗೆ ವಿಸ್ತರಿಸಬೇಕೆಂದು ಆಗ್ರಹಿಸಿದ್ದಾರೆ.

## ಜಿಲ್ಲೆಯಲ್ಲಿ 136 ಪಾಸಿಟಿವ್ ದೃಢ

ದಾವಣಗೆರೆ, ಏ.20- ಜಿಲ್ಲೆಯಲ್ಲಿ ಮಂಗಳವಾರ 136 ಜನರಲ್ಲಿ ಕೊರೊನಾ ಸೋಂಕು ದೃಢಪಟ್ಟ ಬಗ್ಗೆ ವರದಿಯಾಗಿದ್ದು, ಸಕ್ರಿಯ ಸೋಂಕಿತರ ಸಂಖ್ಯೆ 847ಕ್ಕೆ ಏರಿಕೆಯಾಕಿದೆ.

ದಾವಣಗೆರೆಯಲ್ಲಿ 100, ಹರಿಹರ 6, ಜಗಳೂರು 7, ಚನ್ನಗಿರಿ 6, ಹೊನ್ನಾಳಿ 14 ಹಾಗೂ ಹೊರ ಜಿಲ್ಲೆಯ ಮೂವರಲ್ಲಿ ಇಂದು ಸೋಂಕು ಪತ್ತೆಯಾಗಿದೆ. 43 ಜನರು ಸೋಂಕು ಮುಕ್ತರಾಗಿ ಬಿಡುಗಡೆಯಾಗಿದ್ದಾರೆ.

# 10 ಮಂದಿ ಸಾರಿಗೆ ನೌಕರರ ಅಮಾನತ್ತು : 66 ನೌಕರರ ವರ್ಗಾವಣೆ

ದಾವಣಗೆರೆ, ಏ.20- ದಾವಣಗೆರೆ ಮತ್ತು ಹರಿಹರ ಡಿಪೋ ಸೇರಿದಂತೆ 10 ಮಂದಿ ಸಾರಿಗೆ ನೌಕರರನ್ನು ಕೆಎಸ್‌ಆರ್‌ಟಿಸಿ ಸಂಸ್ಥೆಯು ಸೇವೆಯಿಂದ ಇಂದು ಅಮಾನತ್ತುಗೊಳಿಸಿದೆ.

ದಾವಣಗೆರೆಯ ಎರಡು ಡಿಪೋ, ಹರಿಹರದ ಒಂದು ಡಿಪೋದಿಂದ 66 ಜನ ನೌಕರರನ್ನು ಬೇರೆಡೆಗೆ ವರ್ಗಾವಣೆ ಮಾಡಲಾಗಿದೆ. ಸಾರಿಗೆ ನೌಕರರ ಮುಷ್ಕರಕ್ಕೆ ಸಾಥ್ ನೀಡಿದ್ದ 11 ತರಬೇತಿ ಸಿಬ್ಬಂದಿಯನ್ನು ಆಯ್ಕೆ ಪಟ್ಟಿಯಿಂದ ತೆಗೆದು ಹಾಕಲಾಗಿದೆ.

ಸಾರಿಗೆ ನೌಕರರ ವಿರುದ್ಧ ಕರ್ತವ್ಯಕ್ಕೆ ಅಡ್ಡಿಪಡಿಸಿದ ಆರೋಪದ ಮೇಲೆ ಜಿಲ್ಲೆಯ 25 ನೌಕರರ ವಿರುದ್ಧ ಎಫ್‌ಐಆರ್ ದಾಖಲಾಗಿದೆ. ಈ ಪೈಕಿ ದಾವಣಗೆರೆ ವಿಭಾಗದ 12 ಹಾಗೂ ಹರಿಹರ ವಿಭಾಗದ 13 ನೌಕರರ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ. ಕೆಎಸ್‌ಆರ್‌ಟಿಸಿ ನೌಕರರ ಮುಷ್ಕರ ನಡೆಯುತ್ತಿದ್ದರೂ ಕೆಲವು ನೌಕರರು ಕರ್ತವ್ಯಕ್ಕೆ ಹಾಜರಾಗಿದ್ದರು. ಈ ವೇಳೆ ಕೆಲವರು ಅವರನ್ನು ಕೆಲಸ ಮಾಡದಂತೆ ತಡೆದಿದ್ದರು. ಅಲ್ಲದೇ, ತಟ್ಟೆ, ಲೋಟ ಬಡಿದು ಪ್ರತಿಭಟಿಸಿದವರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ.

ಹರಿಹರ ಟೌನ್ ಪೊಲೀಸ್ ಠಾಣೆಯಲ್ಲಿ 13, ಕೆಟಿಜಿ ನಗರ ಪೊಲೀಸ್ ಠಾಣೆಯಲ್ಲಿ 12 ಜನರ ಮೇಲೆ ಎಫ್‌ಐಆರ್ ದಾಖಲಿಸಲಾಗಿದೆ ಎಂದು ಕೆಎಸ್‌ಆರ್‌ಟಿಸಿ ವಿಭಾಗೀಯ ನಿಯಂತ್ರಣಾಧಿಕಾರಿ ಸಿದ್ದೇಶ್ವರ್ ಹೆಬ್ಬಾಳ್ ಮಾಹಿತಿ ನೀಡಿದ್ದಾರೆ.

ಸಾರಿಗೆ ನೌಕರರ ಈ ಮುಷ್ಕರದಿಂದ ಇರುವರೆಗೂ 4.50 ಕೋಟಿ ರೂ. ನಷ್ಟು ಉಂಟಾಗಿದೆ. ಇಂದು 120 ಜನರು ಕರ್ತವ್ಯಕ್ಕೆ ಹಾಜರಾಗಿದ್ದು, 90 ಬಸ್‌ಗಳು ವಿವಿಧೆಡೆ ಸಂಚರಿಸಿವೆ ಎಂದು ತಿಳಿಸಿದ್ದಾರೆ.

ವರ್ಗಾವಣೆ, ಅಮಾನತ್ತು, ವಜಾ, ಎಸ್ಮಾ ಕಾಯ್ದೆಯಡಿ ಕೇಸ್ ದಾಖಲು ಇಂತಹ ದಿಟ್ಟ ಕ್ರಮಗಳು ಮುಷ್ಕರ ನಿರತ ಸಾರಿಗೆ ಸಿಬ್ಬಂದಿ ಪೈಕಿ ಅನೇಕರಲ್ಲಿ ಅಳುಕು ಹುಟ್ಟಿ ಹಾಕಿವೆ. ಮುಷ್ಕರ ನಿರತ ಮತ್ತಷ್ಟು ನೌಕರರು ಕರ್ತವ್ಯಕ್ಕೆ ಹಾಜರಾಗುವ ಸಾಧ್ಯತೆ ಹೆಚ್ಚಾಗಿದ್ದು, ಮತ್ತಷ್ಟು ಬಸ್ಸುಗಳು ರಸ್ತೆಗಿಳಿಯುವ ಲಕ್ಷಣಗಳು ಗೋಚರಿಸುತ್ತಿವೆ.

# ಗುತ್ತೂರು ಬಳಿ 130 ಬೆಡ್‌ನ ಕೋವಿಡ್ ಕೇರ್ ಸೆಂಟರ್



ಹರಿಹರ, ಏ.20- ತಾಲ್ಲೂಕಿನಲ್ಲಿ ಕೋವಿಡ್ ರೋಗವನ್ನು ತಡೆಗಟ್ಟಲು ಕೋವಿಡ್ ವಾರ್ ರೂಮ್, ಕೋವಿಡ್ ಕೇರ್ ಸೆಂಟರ್ ತೆರೆಯುವ ಮೂಲಕ ಸಾರ್ವಜನಿಕರಿಗೆ ಲಸಿಕೆ ನೀಡುವುದರೊಂದಿಗೆ ನಿರಂತರವಾಗಿ ಪರೀಕ್ಷೆ ಮಾಡಲಾಗುತ್ತಿದೆ ಎಂದು ತಹಶೀಲ್ದಾರ್ ಕೆ.ಬಿ. ರಾಮಚಂದ್ರಪ್ಪ ತಿಳಿಸಿದರು.

ನಗರದ ತಾಲ್ಲೂಕು ಕಚೇರಿ ಸಭಾಂಗಣದಲ್ಲಿ ಇಂದು ನಡೆದ ಪತ್ರಿಕಾ ಗೋಷ್ಠಿಯಲ್ಲಿ ಅವರು ಮಾತನಾಡಿದರು.

ತಾಲ್ಲೂಕಿನಲ್ಲಿ ದಿನದಿಂದ ದಿನಕ್ಕೆ ಅಧಿಕ ಪ್ರಮಾಣದಲ್ಲಿ ಕೋವಿಡ್ ಸೋಂಕು ಹರಡುತ್ತಿದ್ದು, ಇಲ್ಲಿಯವರೆಗೆ ಸುಮಾರು ಕೋವಿಡ್ ಪ್ರಕರಣಗಳಿವೆ. ಅದರಲ್ಲಿ ಒಬ್ಬರು ಮೃತಪಟ್ಟಿದ್ದಾರೆ. ಈಗಾಗಲೇ ನಗರದ ಸಾರ್ವಜನಿಕ ಆಸ್ಪತ್ರೆಯ ಆವರಣದಲ್ಲಿ ಕೋವಿಡ್ ಕೇರ್ ಸೆಂಟರ್ ತೆರೆಯಲಾಗಿದೆ. ನಗರದ ಹೊರವಲಯದ ಗುತ್ತೂರು ಗ್ರಾಮದ ಬಳಿ ಇರುವ ಹಾಸ್ಟೆಲ್ ಆವರಣದಲ್ಲಿ 130 ಬೆಡ್‌ನ ಕೇರ್ ಸೆಂಟರ್ ಸ್ಥಾಪನೆಯನ್ನು ಶೀಘ್ರವಾಗಿ ಮಾಡಲಾಗುತ್ತದೆ ಎಂದರು.

ತಾಲ್ಲೂಕು ಆರೋಗ್ಯ ಕೇಂದ್ರ ಕಚೇರಿಯ ಆವರಣದಲ್ಲಿ ಇಂದಿನಿಂದ ಕೋವಿಡ್ ವಾರ್ ರೂಮ್ ತೆರೆಯಲಾಗಿದೆ.

ಅಲ್ಲಿ ಬೆಳಿಗೆ 8 ರಿಂದ ರಾತ್ರಿ 8 ಗಂಟೆಯವರೆಗೆ ಸಾರ್ವಜನಿಕರು ಕೋವಿಡ್ ವಿಚಾರದಲ್ಲಿ ಕರೆ ಮಾಡಿ ಮಾಹಿತಿ ಪಡೆಯಲು ಅವಕಾಶ ಕಲ್ಪಿಸಲಾಗಿದೆ.

### ಹರಿಹರ ತಹಶೀಲ್ದಾರ್ ಕೆ.ಬಿ. ರಾಮಚಂದ್ರಪ್ಪ

ಕೊರೊನಾ ರೋಗವನ್ನು ತಡೆಗಟ್ಟಲು ಅಧಿಕಾರಿಗಳು ಮತ್ತು ಸಿಬ್ಬಂದಿಯವರು ಜಾಗೃತರಾದರೆ ಸಾಲದು, ಸಾರ್ವಜನಿಕರು ಸಹ ಈ ರೋಗವನ್ನು ತಡೆಗಟ್ಟಲು ಜಾಗೃತಿ ವಹಿಸುವುದು ಮತ್ತು ಸರ್ಕಾರದ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲಿಸುವುದು ಸೂಕ್ತವಾಗಿದೆ. ಇದರಿಂದಾಗಿ ಕೊರೊನಾ ರೋಗವನ್ನು ತಡೆಗಟ್ಟಲು ಸಾಧ್ಯವಾಗುತ್ತದೆ ಎಂದು ಹೇಳಿದರು.

ತಾಲ್ಲೂಕು ಆರೋಗಾಧಿಕಾರಿ ಡಾ. ಚಂದ್ರಮೋಹನ್ ಮಾತನಾಡಿ, ತಾಲ್ಲೂಕಿನಲ್ಲಿ ಪ್ರತಿದಿನ 400 ಜನರಿಗೆ ಕೋವಿಡ್ ತಪಾಸಣೆ ಮಾಡಲಾಗುತ್ತದೆ. ನಗರದ ಸಾರ್ವಜನಿಕ ಆಸ್ಪತ್ರೆ ಸೇರಿದಂತೆ ತಾಲ್ಲೂಕಿನ 13 ಆರೋಗ್ಯ ಕೇಂದ್ರಗಳಲ್ಲಿ ಇಲ್ಲಿಯವರೆಗೆ 17,559 ಸಾರ್ವಜನಿಕರಿಗೆ ಕೋವಿಡ್ ಲಸಿಕೆ ಹಾಕಲಾಗಿದೆ. ಇಲ್ಲಿಯವರೆಗೆ ಲಸಿಕೆಯನ್ನು ಹಾಕಿಸಿಕೊಂಡಿರುವ ಯಾವುದೇ ವ್ಯಕ್ತಿಗಳಿಗೆ ಆರೋಗ್ಯದ ಅಡ್ಡಪರಿಣಾಮಗಳು ಬಂದಿರುವುದಿಲ್ಲ ಎಂದು ಹೇಳಿದರು.

ಈ ಸಂದರ್ಭದಲ್ಲಿ ಬಿ.ಸಿ.ಎಂ. ಹಾಸ್ಟೆಲ್ ವಿಸ್ತಾರಣಾಧಿಕಾರಿ ಎಚ್.ಬಿ. ಪಾಟೀಲ್, ರಂಗನಾಥ ಇನ್ನಿತರರಿದ್ದರು.

# ವೀರಶೈವ ಸಭಾದಿಂದ ಸಾರ್ವಜನಿಕರಿಗೆ ಉಚಿತ ಮಾಸ್ಕ್ ವಿತರಣೆ



ದಾವಣಗೆರೆ, ಏ.20- ದೇಶದಾದ್ಯಂತ ಕೊರೊನಾದ ಎರಡನೇ ಅಲೆಯು ತೀವ್ರವಾಗಿ ಹರಡುತ್ತಿದೆ. ಈ ಹಿನ್ನೆಲೆಯಲ್ಲಿ ಪ್ರತಿಯೊಬ್ಬರೂ ಮಾಸ್ಕ್ ಧರಿಸಿ, ಸಾಮಾಜಿಕ ಅಂತರ ಕಾಪಾಡಿಕೊಂಡು, ಸ್ಯಾನಿಟೈಸರ್ ಬಳಸಿ ಕೊರೊನಾ ಸೋಂಕಿನ ವಿರುದ್ದ ಹೋರಾಡಬೇಕು ಎಂದು ಅಖಿಲ ಭಾರತ ವೀರಶೈವ ಮಹಾಸಭಾದ ಜಿಲ್ಲಾ ಘಟಕದ ಅಧ್ಯಕ್ಷ ದೇವರಮನೆ ಶಿವಕುಮಾರ್ ಸಾರ್ವಜನಿಕರಿಗೆ ತಿಳಿ ಹೇಳಿದರು.

ಇಂದು ನಗರದ ಗಡಿಯಾರ ಕಂಬದ ಬಳಿ ಕೋವಿಡ್ ವೈರಸ್ ಹರಡುವಿಕೆ ತಡೆಗಟ್ಟುವ ಬಗ್ಗೆ ಹಾಗೂ ಮಾಸ್ಕ್ ಬಳಕೆಯ ಅರಿವು ಮೂಡಿಸುವ ಸಲುವಾಗಿ ಅಖಿಲ ಭಾರತ ವೀರಶೈವ ಮಹಾಸಭಾದ ಜಿಲ್ಲಾ ಘಟಕದ ವತಿಯಿಂದ ರಸ್ತೆ ಬದಿ ವ್ಯಾಪಾರಿಗಳಿಗೆ, ಆಟೋ ಚಾಲಕರಿಗೆ, ಸಾರ್ವಜನಿಕರಿಗೆ ಉಚಿತವಾಗಿ ಮಾಸ್ಕ್ ವಿತರಣೆ ಮಾಡಲಾಯಿತು.

ಈ ವೇಳೆ ಮಾತನಾಡಿದ ದೇವರಮನೆ ಶಿವಕುಮಾರ್, ಮುಂದಿನ ದಿನಗಳಲ್ಲಿ ನಗರದಾದ್ಯಂತ ಉಚಿತವಾಗಿ ಮಾಸ್ಕ್ ವಿತರಣೆಯನ್ನು ನಮ್ಮ ಘಟಕದ ವತಿಯಿಂದ ಮಾಡಲಾಗುವುದು ಎಂದು ಹೇಳಿದರು.

ವಿಜಯಲಕ್ಷ್ಮಿ ರಸ್ತೆ, ಕಾಯಿಪೇಟೆ, ತರಕಾರಿ ಮಾರುಕಟ್ಟೆ ಸೇರಿದಂತೆ ನಗರದ ಹಲವು ಕಡೆ ಸಾವಿರ ಮಾಸ್ಕ್‌ಗಳನ್ನು ವಿತರಣೆ ಮಾಡಲಾಯಿತು. ಈ ಸಂದರ್ಭದಲ್ಲಿ ನಗರ ಪಾಲಿಕೆ ಸದಸ್ಯರಾದ ಶಿವನಗೌಡ ಟಿ. ಪಾಟೀಲ್, ಟಿಂಕರ್ ಮಂಜಣ್ಣ, ಕರಿಯಪ್ಪರ ಸಿದ್ದೇಶ್, ಮಾಗಿ ಪ್ರಕಾಶ್, ಶೀಕಾಂತ್ ನೀಲಗುಂದ, ಅಭಿಷೇಕ್ ಪಿ. ಎಳೆಹೊಳೆ, ಶಿವಾನಂದ ಬೆನ್ನೂರ್, ದೇವೇಂದ್ರಪ್ಪ, ಮಹಿಳಾ ಘಟಕದ ಶೋಭಾ ಕೊಟ್ರೇಶ್, ಪುಷ್ಪಾ ವಾಲಿ, ದ್ರಾಕ್ಷಾಯಣಿ, ಕವಿತಾ, ಸುಮಂಗಲಾ ಸೇರಿದಂತೆ ಇತರರು ಇದ್ದರು.



## ಅಣಜಿ - ಗೊಲ್ಲರಹಳ್ಳಿಯಲ್ಲಿನ ಇಂದಿನ ರಥೋತ್ಸವ ರದ್ದು


ದಾವಣಗೆರೆ ತಾಲ್ಲೂಕು ಅಣಜಿ ಗೊಲ್ಲರಹಳ್ಳಿ ಗ್ರಾಮದಲ್ಲಿ ಇಂದು ನಡೆಯಬೇಕಿದ್ದ ಶ್ರೀ ಲಕ್ಷ್ಮಿ ವೆಂಕಟೇಶ್ವರ ಸ್ವಾಮಿಯ ರಥೋತ್ಸವವನ್ನು ರದ್ದುಪಡಿಸಲಾಗಿದೆ ಎಂದು ದೇವಸ್ಥಾನ ಸಮಿತಿಯ ಬಿ.ಟಿ. ಸಿದ್ದಪ್ಪ ತಿಳಿಸಿದ್ದಾರೆ. ಕೊರೊನಾ ಹಿನ್ನೆಲೆಯಲ್ಲಿ ಸರ್ಕಾರದ ಮಾರ್ಗಸೂಚಿಯನ್ವಯ ಜಿಲ್ಲಾಧಿಕಾರಿಗಳ ಆದೇಶದ ಮೇರೆಗೆ ಈ ಕ್ರಮ ಕೈಗೊಳ್ಳಲಾಗಿದೆ ಎಂದು ಅವರು ಹೇಳಿದ್ದಾರೆ.

| ರಂಜಾನ್ ರೋಜಾ ಸಮಯ | ದಿನಾಂಕ : 21.04.2021 | ದಿನಾಂಕ 22.04.2021 |
| --- | --- | --- |
| | ಇಫ್ತೇಯಾರಿ ಸಮಯ : 6-47 | ಸಹೇರಿ ಸಮಯ : 4-53 |

## ಫೇಸ್‌ಬುಕ್ ಖಾತೆ ಭದ್ರತೆಗೆ ಸಲಹೆ

ನವದೆಹಲಿ, ಏ. 20 - ಇತ್ತೀಚೆಗೆ ಜಾಗತಿಕವಾಗಿ ಫೇಸ್‌ಬುಕ್ ಮಾಹಿತಿ ಸೋರಿಕೆಯಾಗಿರುವುದರಿಂದ ಭಾರತದ ಬಳಕೆದಾರರು ತಮ್ಮ ಖಾತೆಗಳ ಭದ್ರತೆ ಹೆಚ್ಚಿಸಿಕೊಳ್ಳಬೇಕು ಎಂದು ಸೈಬರ್ ಸುರಕ್ಷತಾ ಸಂಸ್ಥೆಯಾದ ಸಿಇಆರ್‌ಟಿ-ಇನ್ ತಿಳಿಸಿದೆ. ಫೇಸ್‌ಬುಕ್ ವೇದಿಕೆ ಬೆಳೆಯುತ್ತಾ ಹಾಗೂ ಬದಲಾಗುತ್ತಾ ಸಾಗಿದಂತೆ ಜನರ ಖಾತೆಗಳ ಮಾಹಿತಿಗಳು ಬಯಲಾಗುವ ಸಾಧ್ಯತೆ ಇರುತ್ತದೆ. ಜನರಿಗೆ ತಿಳಿಯದಂತೆ ಅವರ ಮಾಹಿತಿ ಸಂಗ್ರಹಿಸಿ ವಿತರಿಸುವ ಸಾಧ್ಯತೆ ಇರುತ್ತದೆ ಎಂದು ಸಿಇಆರ್‌ಟಿ - ಇನ್ ಹೇಳಿಕೆಯಲ್ಲಿ ತಿಳಿಸಲಾಗಿದೆ.


## ಹತ್ತನೇ ವರ್ಷದ ಪುಣ್ಯಸ್ಮರಣೆ



**ದಿ|| ಸಂಗಪ್ಪ ಗಟ್ಟಿಗನೂರು**

ನಿಧನ: 21.4.2011

ನೀವು ನಮ್ಮನ್ನು ಅಗಲಿ ಇಂದಿಗೆ ಹತ್ತು ವರ್ಷಗಳಾದವು.

ಸದಾ ನಿಮ್ಮ ಸ್ಮರಣೆಯಲ್ಲಿರುವ...

ಪತ್ನಿ: ಶ್ರೀಮತಿ ಭೀಮಮ್ಮ ಗಟ್ಟಿಗನೂರು, ಮಕ್ಕಳು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಅಮರೇಶ್ ಗಟ್ಟಿಗನೂರು ಮತ್ತು ಸಹೋದರರು. ಹಾಗೂ ಬಂಧು-ಮಿತ್ರರು, ದಾವಣಗೆರೆ.

## ಅಶ್ರುತರ್ಪಣ



ಉತ್ಸಾಹಿ ಯುವಕ ಹಾಗೂ ದಾವಣಗೆರೆ ದಿಗಂಬರ ಜೈನ ಸಮಾಜದ ಧಾರ್ಮಿಕ ಹಾಗೂ ಸಾಮಾಜಿಕ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಮುಂದಾಳತ್ವ ವಹಿಸುತ್ತಿದ್ದ, ಅತ್ಯಂತ ಕ್ರಿಯಾಶೀಲ ವ್ಯಕ್ತಿತ್ವವುಳ್ಳ ಆತ್ಮೀಯರಾದ

**ಶ್ರೀಯುತ ಅಭಿನಂದನ್ ಎಂ.ಆರ್**

ಇವರು ದಿ : 20-4-2021ರಂದು ನಿಧನರಾಗಿದ್ದು, ಅವರ ಅಕಾಲಿಕ ಮರಣ ನಮಗೆ ಅತೀವ ದುಃಖಕರವಾದ ಸಂಗತಿ. ಅಗಲಿದ ಆತ್ಮಕ್ಕೆ ಶಾಂತಿ ಹಾಗೂ ಸದ್ಗತಿ ದೊರಕಲಿ ಎಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

**ಶ್ರೀ ಮಹಾವೀರ ಸಂಘ (ರಿ.)**
**ಸಮಸ್ತ ದಿಗಂಬರ ಜೈನ ಸಮಾಜ ದಾವಣಗೆರೆ.**



## ಸೋಮೇಶ್ವರ ವಿದ್ಯಾಲಯದಲ್ಲಿ ಕೋವಿಡ್ ಲಸಿಕೆ ಕಾರ್ಯಕ್ರಮ

ದಾವಣಗೆರೆ ಜಿಲ್ಲಾಡಳಿತ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಮಹಾನಗರ ಪಾಲಿಕೆ ಸಂಯುಕ್ತಾಶ್ರಯದಲ್ಲಿ ಶ್ರೀನಿವಾಸ ನಗರ, ಲೆನಿನ್ ನಗರ, ಮೌನೇಶ್ವರ ಬಡಾವಣೆ, ಹೆಚ್‌ಕೆಆರ್ ಸರ್ಕಲ್ ಹಾಗೂ ಇತರೆ ಬಡಾವಣೆಗಳ ಸ್ಥಳೀಯ ನಿವಾಸಿಗಳಿಗೆ ಕೋವಿಡ್-19 ಲಸಿಕಾ ಉತ್ಸವ ಕಾರ್ಯಕ್ರಮ ಏರ್ಪಡಿಸಿದ್ದು ಶ್ರೀ ಎಸ್.ಎ. ರವೀಂದ್ರನಾಥ್, ಮಾನ್ಯ ಶಾಸಕರು, ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರ ಇವರು ಚಾಲನೆ ನೀಡಲಿದ್ದಾರೆ.



**ದಿನಾಂಕ: 22-04-2021ರ ಗುರುವಾರ**

ಸಮಯ : ಬೆಳಿಗ್ಗೆ 10.00 ರಿಂದ ಮಧ್ಯಾಹ್ನ 2.00 ಗಂಟೆಯವರೆಗೆ

ಸ್ಥಳ : ಸೋಮೇಶ್ವರ ವಿದ್ಯಾಲಯ ನಿಟುವಳ್ಳಿ ರಸ್ತೆ, ದಾವಣಗೆರೆ.

ನೋಂದಣಿ ಸಮಯ : ಬೆಳಿಗ್ಗೆ 9.30 ರಿಂದ ಪ್ರಾರಂಭ.

ಸೂಚನೆ: 45 ವರ್ಷ ಮೇಲ್ಪಟ್ಟವರು ಕೋವಿಡ್-19 ಲಸಿಕೆ ಪಡೆಯಲು ತಮ್ಮ ಆಧಾರ್ ಕಾರ್ಡ್ ಹಾಗೂ ಆಧಾರ್ ಕಾರ್ಡ್‌ನಲ್ಲಿ ನೋಂದಾಯಿಸಿರುವ ಮೊಬೈಲ್ ಸಂಖ್ಯೆಯ ಮೊಬೈಲನ್ನು ಕಡ್ಡಾಯವಾಗಿ ತೆಗೆದುಕೊಂಡು ಬರಬೇಕು. ಸಾಮಾಜಿಕ ಅಂತರ ಹಾಗೂ ಕಡ್ಡಾಯ ಮಾಸ್ಕ್ ಧರಿಸಿರಬೇಕು. ಹಿರಿಯ ನಾಗರಿಕರು, ಅಂಗವಿಕಲರು ಸಹಾಯಕ್ಕಾಗಿ ತಮ್ಮ ಜೊತೆಯಲ್ಲಿ ಒಬ್ಬರನ್ನು ಕರೆ ತರಬೇಕು.



**ಸಾರ್ವಜನಿಕರು ಲಸಿಕೆ ಪಡೆದು ಕೋವಿಡ್ ರೋಗದಿಂದ ಮುಕ್ತರಾಗಲು ಕೋರಿದೆ.**


JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte